ಛೇರ್ಮನ್:- ಪ್ರಸ್ತಾವ ಏನೆಂದರೆ, ಮೊದಲನೇ ಖಂಡ ಹೆಸರು ಮತ್ತು ಅವರತಣಿಕೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು.

(ಪ್ರಸ್ತಾಪಕ್ಕೆ ಅಂಗೀಕಾರ ದೊರೆಯಿತು ಮತ್ತು ಮೊದಲನೇ ಖಂಡ, ಹೆಸರು ಮತ್ತು ಅವತರಣಿಕೆ ಇತ್ಯಾದಿಗಳು ವಿಧೇಯಕದ ಅಂಗವಾಯಿತು)

ಪ್ರಸ್ತಾವ ಅಂಗೀಕಾರ

ಶ್ರೀ ಎಸ್.ಬಂಗಾರಪ್ಪ: (ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, 1992ನೇ ಸಾಲಿನ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಈ ಸಭೆಯು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:- ಪ್ರಸ್ತವ ಏನೆಂದರೆ, 1992ನೇ ಸಾಲಿನ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು.

1992ರ ಕರ್ನಾಟಕ ವೃತ್ತಿಗಳು, ಕಸುಬುಗಳು, ಅಜೀವಿಕೆಗಳು ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ

ಶ್ರೀ ಎಸ್.ಬಂಗಾರಪ್ಪ: (ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, 992ರ ಕರ್ನಾಟಕ ವೃತ್ತಿಗಳು, ಕಸಬುಗಳು, ಅಜೀವಿಕೆಗಳು ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

+ ಶ್ರೀ ಎಸ್.ಬಂಗಾರಪ್ಪ :(ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ನಾನು ನನ್ನ ಬಜೆಟ್ ಭಾಷಣದಲ್ಲಿ ಕೆಲವು ಪ್ರಸ್ತಾಪಗಳನ್ನು ಕಾರ್ಯರೂಪಕ್ಕೆ ತರಬೇಕೆಂಬ ಉದ್ದೇಶದಿಂದ ಪ್ರಸ್ತಾಪ ಮಾಡಿದ್ದೆ. ಅದರ ಮೇಲೆ ಕರ್ನಾಟಕ ವೃತ್ತಿಗಳು, ಕಸಬುಗಳು, ಅಜೀವಿಕೆಗಳು ಮತ್ತು ಉದ್ಯೋಗಗಳ ಮೇಲಣ ತೆರಿಗೆ ವಿಧೇಯಕ 1976 ತಿದ್ದುಪಡಿ ತರಬೇಕೆನ್ನುವ ಉದ್ದೇಶ ಇಟ್ಟು ಇದನ್ನು ಮಾಡಿದ್ದೇವೆ. ಇದರಲ್ಲಿ ಕೆಲವು ತಿದ್ದುಪಡಿಗಳನ್ನು ತಾವು ನೋಡಿದರೆ ಗೊತ್ತಾಗುತ್ತದೆ. ಎರಡನೇ ಪುಟದಲ್ಲಿ ಮೂಲ ಅಧಿನಿಯಮದ ಅನುಸೂಚಿಯಲ್ಲಿ ಒಂದನೇ ಕ್ರಮಾಂಕದಲ್ಲಿ ಬಿ ಮತ್ತು ಸಿ ಬಾಬುಗಳಿಗೆ ಸಂಬಂಧಪಟ್ಟಂತೆ ಈ ರೀತಿಯಾಗಿ ಪ್ರಸ್ತಾಪ ಮಾಡಿದ್ದೇವೆ. 2000 ರೂಪಾಯಿಗಳಿಗೆ ಕಡಿಮೆ ಇಲ್ಲದ ಅಂದರೆ ತಿಂಗಳೊಂದಕ್ಕೆ 3 ಸಾವಿರ ರೂಪಾಯಿಗಳಿಗೆ ಕಡಿಮೆ ಇರತಕ್ಕಂಥ ಈ ಬಾಬುಗಳಿಗೆ 30 ರೂಪಾಯಿ, 3 ಸಾವಿರದಿಂದ 4 ಸಾವಿರ ವರೆಗೆ ಕಡಿಮೆ ಇರುವುದಕ್ಕೆ 40 ರೂಪಾಯಿಗಳು 4 ಸಾವಿರಕ್ಕೂ ಕಡಿಮೆ ಇಲ್ಲದೆ ಇರುವ ಐಟಂಗಳಿಗೆ 50 ರೂಪಾಯಿಗಳು. ಅದೇ ರೀತಿಯಾಗಿ ಎರಡನೇ ಕ್ರಮಾಂಕದಲ್ಲಿ ಕೂಡ ಹಾಕಿಕೊಳ್ಳಬೇಕು ಎನ್ನತಕ್ಕಂಥ ವಿಚಾರವನ್ನು ಹೇಳಿದ್ದೇನೆ. ಮೂರನೇ ಅಂಕಣದಲ್ಲಿ 300 ರೂಪಾಯಿ, 500 ರೂಪಾಯಿ, 100 ರೂಪಾಯಿ, 200 ರೂಪಾಯಿ , 3 ಸಾವಿರದ ಅಂಕೆಗಳಿಗೆ ಅನುಕ್ರಮವಾಗಿ 330-550-110-220-330 ಅಂಕೆಗಳನ್ನು ಪ್ರಸ್ತಾಪ ಮಾಡಬೇಕೆಂದು ಇದೆ. ಅನಂತರ ಎರಡನೇ 'ಎ' ಕ್ರಮಾಂಕಕ್ಕೆ ಸಂಬಂಧಪಟ್ಟ ನಮೂದುಗಳಿಗೆ 3ನೇ ಅಂಕಣದಲ್ಲಿ, ವರ್ಷವೊಂದಕ್ಕೆ 500ರೂಪಾಯಿಗಳು ಎಂಬ ಪದಗಳಿಗೆ ವರ್ಷವೊಂದಕ್ಕೆ 550 ರೂಪಾಯಿ ಎಂಬ ಅಂಕೆಗಳನ್ನು ಹಾಕಿಕೊಳ್ಳಬೇಕೆನ್ನುವ ವಿಚಾರವನ್ನು ನಾವು ತಿಳಿಸಿದ್ದೇವೆ ಇದರಲ್ಲಿ ಕೆಲವು ವಿಷಯಗಳಿಗೆ ನಾವು ಬೆಂಗಳೂರು ನಗರ ಸಮುಚ್ಚಯ ಅಥವಾ ಜಿಲ್ಲಾ ಕೇಂದ್ರಗಳು ಮುನಿಸಿಪಲ್ ಪರಿಮಿತಿ

ಆವೃತ್ತದಲ್ಲಿರುವ ಅಧಿನಿಯಮ ಇದರ ಪುಟ-3 ಅನ್ನು ನೋಡಿದರೆ ತಮಗೆ ಗೊತ್ತಾಗುತ್ತದೆ. 2 ವರ್ಷಕ್ಕಿಂತ ಕಡಿಮೆಯಾಗಿದ್ದರೆ ಏನೇನೂ ಹಾಕಿಲ್ಲ, ಫ್ರೀ ಬಿಟ್ಟಿದ್ದೇವೆ. 2 ವರ್ಷ ಅಥವಾ ಅದಕ್ಕಿಂತ ಹೆಚ್ಚು 5 ವರ್ಷಗಳಿಗೆ ಕಡಿಮೆಯಾಗಿದ್ದರೆ, 1 ಸಾವಿರ ರೂಪಾಯಿಗಳನ್ನು, 5 ವರ್ಷಗಳಿಗಿಂತ ಹೆಚ್ಚಾಗಿದ್ದರೆ 1500 ರೂಪಾಯಿ ಇದೆ. ಅದೇ ರೀತಿಯಾಗಿ ನಾವು ಎಷ್ಟೆಷ್ಟು ವರ್ಷಗಳಿಗೆ ಏನೇನು ಎನ್ನತಕ್ಕಂಥಾದ್ದನ್ನು ಕೂಡ ತಿಳಿಸಿದ್ದೇವೆ. ಇದರಲ್ಲಿ ಒಟ್ಟು ಪಟ್ಟಿ ಇದೆ ಅದನ್ನು ಸ್ವಲ್ಪ ಬದಲಾವಣೆ ಮಾತ್ರ ಮಾಡಿರತಕ್ಕಂಥಾದ್ದು. ಇದರಲ್ಲಿ ನಾವು ಯಾವುದೂ ಬೇರೆ ಬದಲಾವಣೆಗಳನ್ನು ಹೆಚ್ಚು ಮಾಡುವುದಕ್ಕೆ ಹೋಗಿಲ್ಲ. ಆದ್ದರಿಂದ ಈ ಒಂದು ತಿದ್ದುಪಡಿ ಮಸೂದೆಗೆ ಸಭೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಸೂದೆಯಲ್ಲಿ ಬೇರೆಯಾವ ದೊಡ್ಡ ವಿಷಯವನ್ನೂ ನಾವು ಇಟ್ಟಿಲ್ಲ. ಅದಕ್ಕೆ ತಾವು ಒಪ್ಪಿಗೆ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

+ ಶ್ರೀ ಶಿವಾನಂದ ಹೆಚ್.ಕೌಜಲಗಿ: (ಬೈಲಹೊಂಗಲ):- ಮಾನ್ಯ ಅಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರು ವೃತ್ತಿ ತೆರಿಗೆಗಳ ಬಗ್ಗೆ ತಂದಂತಹ ಬಿಲ್ ಏನಿದೆ ಅದನ್ನು ನಾನು ವಿರೋಧಿಸುತ್ತೇನೆ. ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹಣಕಾಸಿನ ಸಚಿವರು ಒಂದು ಮಾತು ಹೇಳಿದರು. 2 ವರ್ಷಗಳ ತನಕ ಯಾವುದೇ ಒಂದು ಮೆಡಿಕಲ್ ಪ್ರಾಕ್ಟೀಸ್ ಅಥವಾ ಬೇರೆ ಒಂದು ಪ್ರೊಫೆಷನ್ ಮಾಡುವವರಿಗೆ ನಾವು ತೆರಿಗೆಯನ್ನು ಹೆಚ್ಚು ಮಾಡಿಲ್ಲ ಅದು ಕಾರ್ಪೊರೇಷನ್ ಏರಿಯಾಗಳಲ್ಲಿ ಹಾಗೂ ಮುನಿಸಿಪಲ್ ಏರಿಯಾಗಳಲ್ಲಿ ಇದುವರೆವಿಗೆ ಈ ಪ್ರಕಾರ ಟ್ಯಾಕ್ಸ್ ಹಾಕುವಂಥ ಕ್ರಮ ಕೈಗೊಂಡಿದ್ದೇವೆಂದು ಹೇಳಿದ್ದಾರೆ. ನಿಜವಾಗಿ ಇವತ್ತಿನ ದಿವಸ ಹಳ್ಳಿಗಳಲ್ಲಿ, ಕಾರ್ಪೊರೇಷನ್ ಲಿಮಿಟ್‌ನಲ್ಲಿ ಇರತಕ್ಕಂಥವರಿಗೆ ಮತ್ತೆ ಬೇರೆ ಕಡೆ ಹಳ್ಳಿಗಳಲ್ಲಿರುವವರಿಗೆ ಎರಡು ವರ್ಷದ ತನಕ ಏನಿಲ್ಲ 500 ರೂಪಾಯಿ ಪ್ರಕಾರ ಟ್ಯಾಕ್ಸ್ ಹಾಕುವಂಥ ಕ್ರಮ ಕೈಗೊಂಡಿದ್ದೇವೆಂದು ಹೇಳಿದ್ದಾರೆ. ನಿಜವಾಗಿ ಇವತ್ತಿನ ದಿವಸ ಹಳ್ಳಿಗಳಲ್ಲಿ, ಕಾರ್ಪೊರೇಷನ್ ಅಥವಾ ಮುನಿಸಿಪಲ್ ಲಿಮಿಟ್‌ನಲ್ಲಿರತಕ್ಕಂಥ ಮೆಡಿಕಲ್ ಪ್ರಾಕ್ಟೀಷನರ್ ಅಥವ ಬೇರೆ ಪ್ರಾಕ್ಟೀಷನರ್‌ಗಳಿಗೆ ಯಾವುದೇ ಉದ್ಯೋಗವಿಲ್ಲ. ಅಂಥಾದ್ದರಲ್ಲಿ ಈ ತೆರಿಗೆಯನ್ನು ಹಾಕುವುದರಿಂದ ಅವರಿಗೆ ಬಹಳ ಅನ್ಯಾಯವಾಗುತ್ತದೆಂದು ನಾನು ತಿಳಿಯಪಡಿಸುತ್ತೇನೆ. ಎರಡನೆಯದಾಗಿ, ಇವತ್ತಿನ ದಿವಸ ಒಂದು ಕಲ್ಯಾಣ ಮಂಟಪಕ್ಕೂ ಸಹ 2500 ರೂಪಾಯಿವರೆಗೆ ಟ್ಯಾಕ್ಸ್ ಹಾಕಿದ್ದಾರೆ. ಇವತ್ತು ತಾವು ಓದಬಹುದು. ಕಲ್ಯಾಣ ಮಂಟಪಕ್ಕೆ " Persons owning marriage halls or kalyana Mantaps". ಇವಕ್ಕೆ ಮತ್ತು ಒಂದು ಧಾರ್ಮಿಕ ಕಾರ್ಯಕ್ರಮಕ್ಕೆ ಸಹಿತಾ 2500 ರೂಪಾಯಿವರೆಗೆ ಟ್ಯಾಕ್ಸ್ ಹಾಲಿಕ್ಕೆ ಹಚ್ಚಿದ್ದಾರೆ. ನಾವು ಒಂದು ಕಡೆ ಹೇಳುತ್ತೇವೆ. ಈ ಆರಾಧನಾ ಸ್ಕೀಮ್ ಎಂದು ಧಾರ್ಮಿಕ ಕಾರ್ಯಗಳಿಗೆ ನಾವು ಪ್ರೋತ್ಸಾಹ ಕೊಡುತ್ತೇವೆಂದು ಹೇಳುತ್ತಾರೆ. ಇನ್ನೊಂದು ಕಡೆ ಅದರ ಮೇಲೆ ಟ್ಯಾಕ್ಸ್ ಹಾಕುವಂಥ ಕ್ರಮ ಕೈಗೊಳ್ಳುತ್ತಿದೆ. ಆದಕಾರಣ, ಇವತ್ತಿನ ದಿವಸ ಪ್ರತಿಯೊಂದು ಐಟಮ್ ಮೇಲೆ 30 ಪರ್‌ಸೆಂಟ್ ಹೆಚ್ಚಿಗೆ ಟ್ಯಾಕ್ಸ್ ಹಾಕಲಿಕ್ಕೆ ಹತ್ತಿದ್ದಾರೆ. ಇದು ಯೋಗ್ಯವಾದುದಲ್ಲ. ಆದಕಾರಣ, ಮಾನ್ಯ ಹಣಕಾಸಿನ ಸಚಿವರು ತಂದಂಥ ಬಿಲ್ಲನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ: (ಶಿಕಾರಿಪುರ):- ಸನ್ಮಾನ್ಯ ಅಧ್ಯಕ್ಷರೆ, ವೃತ್ತಿ ತೆರಿಗೆಯನ್ನು ತೆಗೆಯಬೇಕೆಂದು ಇತ್ತು, ಈ ಪ್ರೊಫೆಷನಲ್ ಟ್ಯಾಕ್ಸ್‌ನ್ನು ಸಂಪೂರ್ಣ ತೆಗೆದುಹಾಕಬೇಕು

ಎನ್ನುವುದು ಆ ವೃತ್ತಿ ಮಾಡುತ್ತಿರುವಂಥ ಎಲ್ಲರದೂ ಅಭಿಪ್ರಾಯ ಇತ್ತು. ಮತ್ತು ಸದನದ ಒಳಗಡೆ ಈ ಪ್ರೊಫೆಷನಲ್ ಟ್ಯಾಕ್ಸ್‌ಅನ್ನು ಯಾವ ಕಾರಣಕ್ಕೂ ಸಹಾ ಇಂಟ್ರಡ್ಯೂಸ್ ಮಾಡಬಾರದು. ಇರುವುದನ್ನು ತೆಗೆದುಹಾಕಬೇಕೆಂದು ನಮ್ಮ ಒತ್ತಾಯ ಇತ್ತು. ಇವತ್ತು ಗ್ರಾಮೀಣ ಪ್ರದೇಶದಲ್ಲಿ ದಂತ ವೈದ್ಯರು ಇರಬಹುದು ಅಥವಾ ಬೇರೆ ರೀತಿ ಮೆಡಿಕಲ್ ಪ್ರ್ಯಾಕ್ಟೀಷನರ್ಸ್ ಇರಬಹುದು, ಎರಡು ವರ್ಷದ ನಂತರ ಏನಾದರೂ ಕೆಲಸಮಾಡುತ್ತಿದ್ದರೆ, ವರ್ಷಕ್ಕೆ ಒಂದು ಸಾವಿರ ರೂಪಾಯಿ ಪ್ರೊಫೆಷನಲ್ ಟ್ಯಾಕ್ಸ್ ಹಾಕುತ್ತಿದ್ದೀರಿ. ನಾನು ಹೇಳುವಂಥಾದ್ದು ಸಣ್ಣಾನ್ಯ ಹಣಕಾಸು ಮತ್ತು ಮಾನ್ಯ ಮುಖ್ಯ ಮಂತ್ರಿಯವರಿಗೆ ಗೊತ್ತಿರಬಹುದು. ಗ್ರಾಮೀಣ ಪ್ರದೇಶದಲ್ಲಿ ಒಂದು ಪುರಸಭೆ ಲಿಮಿಟ್ ಒಳಗೆ ಇರುವಂಥ ಈ ರೀತಿಯ ಮೆಡಿಕಲ್ ಪ್ರ್ಯಾಕ್ಟೀಷನರ್ಸ್, ಅವನು ಡೆಂಟಿಸ್ಟ್ ಇರಬಹುದು ಅಥವಾ ಬೇರೆ ಇರಬಹುದು, ಇವನು ವರ್ಷಕ್ಕೆ ಎರಡು ಮೂರು ಸಾವಿರ ರೂಪಾಯಿ ಆದಾಯ ಅಲ್ಲದೆ ಒದ್ದಾಡುತ್ತಾ, ಉದ್ಯೋಗ ಇಲ್ಲದೇ ಇರುವುದಕ್ಕೋಸ್ಕರ, ಇವನು ಗ್ರಾಮೀಣ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಕೆಲಸ ಮಾಡುತ್ತಿದ್ದಾನೆ. ಇದರಿಂದ ಬಹುಶ: ಅವನು ಪ್ರಾಮಾಣಿಕವಾಗಿ ಕೆಲಸ ಮಾಡದೇನೆ ಈ ದುಡ್ಡನ್ನು ದುಡಿಯದೇ ಇರುವಂಥ ಕಾಲದಲ್ಲಿ ಸಾಮಾನ್ಯ ಜನರು ಯಾರು ಇವನಲ್ಲಿಗೆ ಟ್ರೀಟ್‌ಮೆಂಟಿಗೆ ಬರುತ್ತಾರೋ ಅವರಿಂದ ಹೆಚ್ಚಿಗೆ ಫೀಸನ್ನು ತೆಗೆದುಕೊಳ್ಳುವಂಥಾದ್ದು, ಆ ಜನಗಳ ಮೇಲೆ ಇದರಿಂದ ಕೆಟ್ಟ ಪರಿಣಾಮ ಆಗುವಂಥಾದ್ದು ಸ್ವಾಭಾವಿಕವಾಗಿರತಕ್ಕಂಥ ಸಂಗತಿ. ಎರಡನೆಯದು ನಾನು ಹೇಳುತ್ತೇನೆ, ತಾಲ್ಲೂಕು ಮಟ್ಟದವರೆಗೆ ಪ್ರೊಫೆಷನಲ್ ಟ್ಯಾಕ್ಸ್ ಹಾಕುವ ಯೋಚನೆ ಮಾಡುವುದನ್ನು ಸಂಪೂರ್ಣವಾಗಿ ಕೈ ಬಿಡದಿದ್ದರೆ ಗ್ರಾಮೀಣ ಪ್ರದೇಶದಲ್ಲಿ ಆಗತ್ಯ ವಸ್ತುಗಳ ಬೆಲೆ ಗಗನಕ್ಕೆ ಏರುತ್ತಿರುವ ಸಂದರ್ಭದಲ್ಲಿ ಅವನು ಡಾಕ್ಟರ್, ಇರಬಹುದು, ಡೆಂಟಿಸ್ಟ್ ಇರಬಹುದು, ಅವನು ತುಂಬಾ ನೆಮ್ಮದಿಯಿಂದ ಜೀವನ ಮಾಡುತ್ತಿದ್ದಾನೆ ಎಂದು ನಾವು ನಿರೀಕ್ಷೆ ಮಾಡುವುದು ಸರಿಯಲ್ಲ ಎನ್ನುವುದು ಒಂದು. ಮತ್ತೆ ಗ್ರಾಮೀಣ ಪ್ರದೇಶದಲ್ಲಿರುವಂಥ ಕಲ್ಯಾಣ ಮಂದಿರಗಳಿಗೆ ಸಹ ನೀವು ಈ ರೀತಿ ಮಾಡಿರುವುದಕ್ಕೆ ಹೊರಟಿರುವುದರಿಂದ, ಬಹುಶ: ಸಾಮಾನ್ಯ ಜನಕ್ಕೆ ತೊಂದರೆಯಾಗುತ್ತದೆ, ಹೊಡೆತ ಆಗುತ್ತದೆ. ಅದಕ್ಕೋಸ್ಕರ ಈ ಪ್ರೊಫೆಷನಲ್ ಟ್ಯಾಕ್ಸ್ ಹಾಕುವಂಥ ಪ್ರಯತ್ನ ಏನು ಮಾಡುತ್ತಿದ್ದೀರಿ ಅದನ್ನು ನಾವು ಸಂಪೂರ್ಣ ವಿರೋಧ ಮಾಡುತ್ತೇವೆ. ಇದನ್ನು ಕೈಬಿಡಬೇಕು ವಾಪಸ್ಸು ತೆಗೆದುಕೊಳ್ಳಬೇಕೆಂಬ ಒತ್ತಾಯವನ್ನು ಮೊದಲಿಂದಲೂ ನಾವು ಮಾಡುತ್ತಿದ್ದೇವೆ. ನಿಜ, ನಿಮ್ಮ ಸರ್ಕಾರದ ಬೊಕ್ಕಸಕ್ಕೆ ಹೆಚ್ಚಿನ ತೆರಿಗೆ ಬೇಕು. ಆದರೆ ಸೋರಿ ಹೋಗುತ್ತಿರುವಂಥ ಸಂಪನ್ಮೂಲಗಳನ್ನು ಕ್ರೋಡೀಕರಿಸುವ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕೇ ಹೊರತು, ಒಂದು ಬಜೆಟ್ ಬಂತು, ಎಂದರೆ, ಒಂದು ರೀತಿ ತೆರಿಗೆ ಹೇರುವಂಥ ಒಂದು ಪ್ರವೃತ್ತಿಯನ್ನು ಪ್ರತಿ ವರ್ಷದ ಬಜೆಟ್‌ನಲ್ಲಿ ನಾವು ಕಾಣುತ್ತಿದ್ದೇವೆ. ಈ ರೀತಿ ಯೋಚನೆ ಮಾಡುವುದನ್ನು ಕೈಬಿಟ್ಟು, ಸೋರಿ ಹೋಗುತ್ತಿರುವುದರ ಕಡೆ ನಮ್ಮ ಸರ್ಕಾರದ ಬೊಕ್ಕಸವನ್ನು ತುಂಬುವ ಕಡೆ ವಿಶೇಷ ಗಮನ ಕೊಡಬೇಕು. ಅದಕ್ಕೆ ನಾವಿರಾರು ಮಾರ್ಗಗಳಿವೆ. ಅದನ್ನು ಬಿಟ್ಟು ಸಾಮಾನ್ಯ ವ್ಯಕ್ತಿಗಳ ಮೇಲೆ ತೆರಿಗೆಯನ್ನು ಜಾಸ್ತಿ ಹಾಕುವಂಥ ಪ್ರಯತ್ನವನ್ನು ಈ ಸರ್ಕಾರ ಏನು ಮಾಡುತ್ತಿದೆ, ಇದನ್ನು ಸಾಮಾನ್ಯ ಜನರು ಸಹಿಸುವುದಕ್ಕೆ ಸಾಧ್ಯವಿಲ್ಲದೆ ಇರತಕ್ಕಂಥ ಒಂದು ಪರಿಸ್ಥಿತಿ ಇದೆ. ಅದಕ್ಕೋಸ್ಕರ ಪ್ರೊಫೆಷನಲ್ ಟ್ಯಾಕ್ಸ್‌ನ್ನು ಜಾಸ್ತಿ ಮಾಡುವಂಥ ಮತ್ತು ಹೊಸದಾಗಿ ಹಾಕುವಂಥ ಪ್ರಯತ್ನ ಏನು ಮಾಡುತ್ತಿದ್ದೀರಿ, ಇದನ್ನು ಸಂಪೂರ್ಣವಾಗಿ ನಾವು ವಿರೋಧ ಮಾಡುತ್ತೇವೆ. ಇದನ್ನು ಕೈಬಿಡಬೇಕೆಂಬ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡುತ್ತಿದ್ದೇನೆ.

ಶ್ರೀ ಎಸ್.ಬಂಗಾರಪ್ಪ;- ಮಾನ್ಯ ಸಭಾಧ್ಯಕ್ಷರೆ, ಇದರಲ್ಲಿ ಉದ್ದೇಶ ಇರತಕ್ಕಂಥಾದ್ದು ಏನೆಂದರೆ, ತಮಗೆ ಗೊತ್ತಿರುವ ಹಾಗೆ, ಪಟ್ಟಣ, ನಗರ ಪ್ರದೇಶಗಳಲ್ಲಿ ಕಲ್ಯಾಣ ಮಂಟಪಗಳು ಏನಿವೆ ಅವು ವರ್ಷಗಟ್ಟಲೇ ಬುಕ್ ಆಗಿರುತ್ತವೆ. ಚೆನ್ನಾಗಿ ದುಡಿಮೆಯನ್ನೂ ಮಾಡುತ್ತಿದ್ದಾರೆ. ಈಗಾಗಲೇ ಸಿನಿಮಾ ಟಾಕೀಸ್ ಕಟ್ಟಿಸುವುದಕ್ಕಿಂಥ ಕಲ್ಯಾಣ ಮಂಟಪಗಳನ್ನು ಕಟ್ಟಿಸಿ ದುಡಿಮೆ ಮಾಡುವುದು ಒಳ್ಳೆಯದು ಎನ್ನುವ ತೀರ್ಮಾನಕ್ಕೆ ಬಂದಿದ್ದಾರೆ. ಈ ಸಿನಿಮಾ ಥಿಯೇಟರ್ ಕಟ್ಟಿಸಿದರೆ ಖರ್ಚು ಜಾಸ್ತಿ. ಅದು ಈ ರೀತಿ ಇರಬೇಕು, ಎಂಟರ್‌ಟೇನ್‌ಮೆಂಟ್ ಟ್ಯಾಕ್ಸ್ ಆಕ್ಟ್ ರಕಾರ ಎಲ್ಲಾ ಇರಬೇಕು, ಇತ್ಯಾದಿ ಇತ್ಯಾದಿ ಎಲ್ಲಾ ಬರುತ್ತದೆ. ಆದರೆ ಕಲ್ಯಾಣ ಮಂಟಪಕ್ಕೆ ಅಷ್ಟೊಂದು ಏನೂ ಬರುವುದಿಲ್ಲ ಎನ್ನುವ ದೃಷ್ಟಿಯಿಂದ ಬುದ್ಧಿವಂತಿಕೆ ಮಾಡಿ very flourishing business ದೃಷ್ಟಿಯಿಂದ ಮಾಡಿರತಕ್ಕಂಥಾದ್ದು ಸರ್ಕಾರದ ಗಮನಕ್ಕೆ ಬಂದಿದೆ. ತಾವು ಕೂಡ ಒಪ್ಪುತ್ತೀರಿ. ಕೆಲವು ತೆರಿಗೆಗಳನ್ನು ಹಾಕಿ ನಾವು ವಸೂಲಿ ಮಾಡದೇ ಇದ್ದರೆ, we cannot maintain our budgetary proposals for getting revenues. ಈ ಒಂದು ದೃಷ್ಟಿಯಿಂದ ಅದನ್ನು ನಾವು ಮಾಡಿದ್ದೇವೆ. ಗ್ರಾಮೀಣ ಪ್ರದೇಶಕ್ಕೆ ನೀವು ತೆಗೆದುಕೊಂಡು ಹೋಗತಕ್ಕಂಥಾದ್ದು ಬೇಡ, ಅಲ್ಲಿಯೂ ಕೂಡ ತೊಂದರೆಯಾಗುತ್ತದೆ ಎಂದು ಹೇಳಿದ ವಿಚಾರಗಳನ್ನು ನಾವು ಗಮನಿಸ ಬೇಕಾಗುತ್ತದೆ. ನಾವು ಅದಕ್ಕೆ ಯಾವರೀತಿಯಾಗಿ ಶರತ್ತುಗಳನ್ನು , ನಿಯಮಗಳನ್ನು ಇಡಬೇಕೆಂದು ನೋಡಿ, ತಾವು ಹೇಳಿರತಕ್ಕಂಥ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಸರಕಾರದವರು ಮುಂದಕ್ಕೆ ಹೋಗುತ್ತೇವೆ. ಇನ್ನು ಪ್ರೊಫೆಶನಲ್ ಟ್ಯಾಕ್ಸ್ ವಿಚಾರದಲ್ಲಿ ವಾದ ಇದೆ. ಆದರೆ ಈ ವೃತ್ತಿ ತೆರಿಗೆಯನ್ನು ಹಾಕತಕ್ಕಂಥಾದ್ದರಲ್ಲಿ ಕೆಲವರ ಮೇಲೆ ಹಾಕ ಬೇಕೆಂಬುದೂ ಇದೆ, ಕೆಲವರ ಮೇಲೆ ಈ ತೆರಿಗೆಯನ್ನು ತೆಗೆಯಬೇಕೆಂಬ ವಿಚಾರವೂ ಕೂಡ ಇದೆ. ಈಗ ನಾವು ಡಿಶಾಂಟೆನಾ ಮತ್ತು ಕೇಬಲ್ ಟಿವಿ ವಿಚಾರವನ್ನು ಮಾಡೋಣ. ಅದೂ ಕೂಡ ಪ್ರೊಫೆಷನಲ್ ಆಗಿದೆ. ಮೊದಲು ಇವು ಇರಲಿಲ್ಲವಾದರೂ ಈಗ ಎಲ್ಲಾ ಕಡೆಗಳಲ್ಲಿಯೂ ಬಂದುಬಿಟ್ಟಿವೆ. ಹಾಗೆಯೇ ಪ್ರಾಪರ್ಟಿ ಡವಲಪರ್ಸ್, ಲ್ಯಾಂಡ್ ಡೆವಲಪರ್ಸ್, ಬಿಲ್ಡಿಂಗ್ ಡೆವಲಪರ್ಸ್ ಹೀಗೆ ಬಂದಿದೆ. ಮೊದಲು ಇವುಗಳು ಇರಲಿಲ್ಲ. ಈಗ ಅವುಗಳ ಮೇಲೆ ಹಾಕತಕ್ಕಂಥ ವಿಚಾರವನ್ನು ನಾವು ಇಟ್ಟುಕೊಂಡಿದ್ದೇವೆ. ಅನಂತರ ಕಾಂಪ್ಯುಟರ್ ಇನ್ಸಿಟಿಟ್ಯೂಟ್ಸ್ ಕಾಂಪ್ಯುಟರ್ ಟ್ರೈನಿಂಗ್ ಕೊಡತಕ್ಕಂಥಾದ್ದು, ಇವೆಲ್ಲ ಮೊದಲು ಏನೇನೂ ಇರಲಿಲ್ಲ. ಇಂಥವೆಲ್ಲ ಉದ್ಯೋಗಗಳು ಈಗ ಬೇಕಾದಷ್ಟು ಬಂದಿವೆ. ಇನ್ನುಳಿದ ಕೆಲವು ವಿಚಾರಗಳ ಬಗ್ಗೆ ಇದ್ದುದನ್ನು ಸ್ವಲ್ಪ ಜಾಸ್ತಿ ಮಾಡಬೇಕೆಂದು ಸರಕಾರ ವಿಚಾರ ಮಾಡಿದೆ. ಹಾಗೆಯೇ ಮೊದಲು ಇಲ್ಲದಿರತಕ್ಕಂಥ ಕೆಲವು ಐಟಮ್ಸ್‌ನ್ನು ನಾವು ಇಟ್ಟುಕೊಂಡಿದ್ದೇವೆ. ಬೇರೆ ಯಾವುದೇ ಟ್ಯಾಕ್ಸ್‌ಗಳನ್ನು ಹಾಕಲು ನಮಗೆ ಬೇರೆ ದಾರಿಗಳು ಸಿಗುತ್ತಾ ಇಲ್ಲ. ಈ ಒಂದು ದೃಷ್ಟಿಯಿಂದ ನಾವು ವಿಚಾರ ಮಾಡಿದ್ದೇವೆ. ಈಗ ಎಷ್ಟು ವಿಚಾರಗಳನ್ನು ಹಾಕಿಕೊಂಡಿದ್ದೇವೆ, ಮುಂದೆ ಯಾವರೀತಿಯಲ್ಲಿ ಎಕ್ಸ್‌ಪೀರಿಯನ್ಸ್ ಇರುತ್ತದೆ ಎಂಬುದನ್ನು ನೋಡಿ ಪರಿಶೀಲನೆ ಮಾಡೋಣ. ಎಷ್ಟೋ ಸಾರಿ ಇರತಕ್ಕಂಥಾದ್ದನ್ನು ಕಡಿಮೆ ಕೂಡ ಮಾಡಿದ್ದೇವೆ, ಕೆಲವನ್ನು ತೆಗೆದು ಹಾಕಿದ್ದೇವೆ. ನಾವು ರೈತವರ್ಗಕ್ಕೆ ಅಥವಾ ಇತರರಿಗೆ ಸಹಾಯ ಮಾಡಬೇಕೆಂದು ಇದ್ದರೆ ಬೇರೆ ದಾರಿಗಳನ್ನು ನಾವು ಹುಡುಕಲೇ ಬೇಕಾಗುತ್ತದೆ. ಇಲ್ಲವಾದರೆ ಹಣ ಎಲ್ಲಿಂದ ಬರಬೇಕು? ಅಷ್ಟೊಂದು ಕನ್‌ಸೆಶನ್ ನಾವೆಲ್ಲರೂ ಕೊಡುತ್ತಾ ಹೋಗಿದ್ದೇವೆ. ಆದ್ದರಿಂದ ಎಲ್ಲಾ ಮಾನ್ಯ ಸದಸ್ಯರುಗಳು ಈ ಪ್ರೊಪೋಸಲ್‌ಗೆ ಒಪ್ಪಿಗೆ ಕೊಡುತ್ತೀರಿ ಎಂದು ನಂಬಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಈ ಕಲ್ಯಾಣಮಂಟಪಗಳಿಗೆ ತಾಲ್ಲೂಕು ಮಟ್ಟದಲ್ಲಿ ತೆರಿಗೆ ಹಾಕುವುದು ಸರಿಯಲ್ಲ. ನಗರ ಪ್ರದೇಶಗಳಲ್ಲಿ ಶಕ್ತಿ ಇರುವಂಥವರು ಕೊಡುತ್ತಾರೆ. ಆದ್ದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದೆಂದರೆ, , ಕೊನೆಯ ಪಕ್ಷ ತಾಲ್ಲೂಕು ಮಟ್ಟದಲ್ಲಿ ಈ ಟ್ಯಾಕ್ಸ್‌ನ್ನು ವಿಧಿಸಬೇಡಿ. ಅಲ್ಲಿ 150-200 ಜನರು ಸೇರುವ ಕಲ್ಯಾಣ ಮಂಟಪಕ್ಕೆ ನೀವು ಈ ರೀತಿಯಲ್ಲಿ ತೆರಿಗೆ ಹಾಕಿದರೆ ಅವರು ಕೊಡುವುದು ಸಾಧ್ಯವೆ? ಪಾತ್ರೆ ಪಗಡಿ ಸೇರಿ 100-150 ರೂಪಾಯಿಗಳಿಗೆ ಬಾಡಿಗೆಗೆ ಕೊಡುತ್ತಾರೆ. ಆದ್ದರಿಂದ ನಗರ ಪ್ರದೇಶಗಳಿಗೆ ಇದನ್ನು ಇಟ್ಟುಕೊಂಡು ತಾಲ್ಲೂಕು ಮಟ್ಟದಲ್ಲಿ ತೆರಿಗೆ ವಿಧಿಸುವುದನ್ನು ಕೈಬಿಡಿ. ಇದು ನನ್ನ ಸಲಹೆ, ತಾವುಗಳ ಉಪರಿಶೀಲಿಸಬೇಕು.

ಶ್ರೀ ಶಿವಾನಂದ ಹೆಚ್.ಕೌಜಲಗಿ:- ತಾವುಗಳು ಈ ಟ್ಯಾಕ್ಸ್ ವಿಧಿಸುವುದನ್ನು ನಗರ ಪ್ರದೇಶ ಪರಿಮಿತಿಯನ್ನು ಲಕ್ಷದಲ್ಲಿಟ್ಟುಕೊಂಡು ಮಾಡುವುದಾದರೆ ಅಡ್ಡಿ ಇಲ್ಲ. ಇನ್ನು ಚಾರ್ಟರ್ಡ್ ಅಕೌಂಟೆಂಟ್ಸ್‌ಗೆ ತಾವು 2000 ರೂಪಾಯಿ ವೃತ್ತಿತೆರಿಗೆ ಹಾಕಿದ್ದೀರಿ. ಇಷ್ಟು ತೆರಿಗೆ ಇಂಡಿಯಾದ ಬೇರೆ ಯಾವುದೇ ರಾಜ್ಯದಲ್ಲಿ ಇಲ್ಲ. ಆದ್ದರಿಂದ ಅದನ್ನು ತೆಗೆದು ಹಾಕುವ ಬಗ್ಗೆ ತಾವು ವಿಚಾರ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಹೆಚ್.ಬನ್ನಿಕೋಡ್: (ಹಿರೇಕೆರೂರ್):- ಮಾನ್ಯ ಅಧ್ಯಕ್ಷರೆ, ಗ್ರಾಮೀಣ ಪ್ರದೇಶಗಳಲ್ಲಿ ಈ ಕಲ್ಯಾಣ ಮಂಟಪಗಳನ್ನು ಯಾರೂ ನಡೆಸುತ್ತಾ ಇಲ್ಲ, ಕಟ್ಟುತ್ತಾ ಇಲ್ಲ. ಜನರು ಹಣ ಕೂಡಿಸಿ, ಅದಕ್ಕೆ ಸರ್ಕಾರದವರು ಧನಸಹಾಯ ಮಾಡಿದರೆ ಮಾತ್ರ ಅದರಿಂದ ಕಲ್ಯಾಣ ಮಂಟಪಗಳನ್ನು ಕಟ್ಟಿಸಿ ಬಡವರಿಗೆ ಹಳ್ಳಿಯ ಜನರಿಗೆ ಅನುಕೂಲವಾಗಲಿ ಎಂದು ಮಾಡುತ್ತಾರೆ. ಅಂಥವರಿಂದ ಟ್ಯಾಕ್ಸ್ ಪಡೆಯುವುದು ಅಷ್ಟು ಸೂಕ್ತವಲ್ಲ. ಸಿನಿಮಾ ಮಂದಿರಗಳನ್ನು ಕಟ್ಟುವ ಬದಲು ಕಲ್ಯಾಣ ಮಂಟಪಗಳನ್ನು ಕಟ್ಟಿಸಿಕೊಂಡು ಆದಾಯ ಮಾಡುವ ಪರಿಸ್ಥಿತಿ ಎಲ್ಲಿದೆ ಅದಕ್ಕೆ ಸೀಮಿತಗೊಳಿಸಿದರೆ ಅದನ್ನು ಒಪ್ಪುವಂಥ ಮಾತಾಗಬಹುದು. ಆದ್ದರಿಂದ ದಯವಿಟ್ಟು ಗ್ರಾಮೀಣ ಪ್ರದೇಶದ ಕಲ್ಯಾಣಮಂಟಪಗಳಿಗೆ ತೆರಿಗೆ ಹಾಕಬಾರದು, ಹಾಗೆಯೇ ಗ್ರಾಮೀಣ ಪ್ರದೇಶಗಳಲ್ಲಿ ಮೆಡಿಕಲ್ ಪ್ರಾಕ್ಟೀಶರ್ಸ್ ಯಾರಿದ್ದಾರೆ ಅವರಿಗೆ ತಾವುಗಳು ಪ್ರತ್ಸಾಹ ಕೂಡ ಬೇಕೇ ಹೊರತು ಈ ರೀತಿಯಲ್ಲಿ ಟ್ಯಾಕ್ಸ್ ಹಾಕಿ ಅವರನ್ನು ನಿರುತ್ತೇಜರನ್ನಾಗಿ ಮಾಡಬಾರದು. ಅವರು ಡಾಕ್ಟರ್ ಇರಬಹುದು, ವಕೀಲರೇ ಇರಬಹುದು, ಇದರಲ್ಲಿ ಯಾವುದೇ ಒಂದು ಪ್ರೆಸ್ಟೇಜ್ ಪ್ರಶ್ನೆ ಇಲ್ಲ. ತಮ್ಮ ಅನುಭವದಲ್ಲಿರುವಂತೆ, ಕಲ್ಯಾಮಂಟಪ ಅಥವಾ ಹಳ್ಳಿ ಗ್ರಾಮಗಳಿಗೆ ಹೋಗಿ ವೃತ್ತಿ ಮಾಡತಕ್ಕಂಥ ಜವರಿಗೆ ವೃತ್ತಿ ತೆರಿಗೆ ಇರಲಿ ಅಥವಾ ಕಲ್ಯಾಣ ಮಂಟಪದ ತೆರಿಗೆ ಇರಲಿ ಪುನ: ಪರಿಶೀಲಿಸಿ ಈ ರೀತಿಯ ಟ್ಯಾಕ್ಸ್ ಹಾಕುವುದನ್ನು ಕೈಬಿಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪೆರಿಕಲ್.ಎಂ.ಮಲ್ಲಪ್ಪ: (ಚಿಕ್ಕಪೇಟೆ):- ಮಾನ್ಯ ಅಧ್ಯಕ್ಷರೆ, ಈ ವೃತ್ತಿ ತೆರಿಗೆ ಬಗ್ಗೆ ಕೆಲವು ಕಡೆ ಡಾಕ್ಟರ್ಸ್‌ಗೆ ಡೆಂಟಿಸ್ಟ್‌ಗೆ ಚಾರ್ಟರ್ಡ್ ಅಕೌಂಟೆಂಟ್ಸ್‌ಗೆmorethan two years, less than five years - Rs. 1000, more than five years - Rs. 1,500/ - ಎಂದು ವಿವಿಧ ಬೆಲೆ ವಿವಿಧ ವೃತ್ತಿಗೆ ಕೊಟ್ಟಿದ್ದಾರೆ. ಈ ರೀತಿ ವಿವಿಧ ರೀತಿಯಲ್ಲಿಕೊಡುವ ಬದಲು ತಾವು ಇನ್‌ಕಂಟ್ಯಾಕ್ಸ್ ಪೇಯರ್ಸ್ ಯಾರಿರುತ್ತಾರೋ ಇವರೆಲ್ಲ ಇನ್‌ಕಂ ಟ್ಯಾಕ್ಸ್ ಪೇಯರ್ಸ್ ಆಗುತ್ತಾರೆ. ಅವರಿಗೆ ಒಂದು ರೇಟು ನಿಗದಿ ಮಾಡಿದರೆ ಕೆಲವು ಡಾಕ್ಟರ್ಸ್, ಚಾರ್ಟೆಟ್ ಅಕೌಂಟೆಂಟ್ಸ್ ಐದು ವರ್ಷ ಪ್ರಾಕ್ಟೀಸ್ ಮಾಡಿದವರಿಗೆ 20, 25 ಸಾವಿರ ರೂಪಾಯಿಗಳಾದರೂ ಆದಾಯ ಬರುವುದಿಲ್ಲ. ಅಂತಹವರು 5 ವರ್ಷಗಳಿಗಿಂತ ಹೆಚ್ಚಿಗೆ ಪ್ರಾಕ್ಟೀಸ್ ಮಾಡಿದ್ದರೆ ಅವರೂ

ಕೊಡಬೇಕಾಗುತ್ತದೆ. ಅವರ ಪಟ್ಟಿ ಕೂಡ ಇನ್‌ಕಂ ಟ್ಯಾಕ್ಸ್ ಕಚೇರಿಯಲ್ಲಿ ಸಿಗುತ್ತದೆ, ಯಾರೂ ತಪ್ಪಿಸಿಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಆ ತರಹ ಸ್ಲಾಬ್‌ರೇಟ್ ಇಟ್ಟು ಇನ್‌ಕಂಟ್ಯಾಕ್ಸ್ ಪೇಯರ್ಸ್ ಯಾರೇ ಆದರೂ ಅವರಿಗೆ ವೃತ್ತಿ ತೆರಿಗೆ ಅನ್ವಯವಾಗುತ್ತದೆ ಎಂದು ಒಂದು ರೂಲ್ ಇಟ್ಟರೆ ಸಿಂಗಲ್ ಏಜೆನ್ಸಿಯಾಗುತ್ತದೆ, ಆಗ ಟ್ಯಾಕ್ಸ್ ಕಲೆಕ್ಷನ್‌ಗೂ ಸಲೀಸಾಗುತ್ತದೆ. ಇಲ್ಲದಿದ್ದರೆ 5 ವರ್ಷ ಪ್ರಾಕ್ಟೀಸ್ ಮಾಡಿದಾನೆ ಎಂದು ನೋಟಿಸ್ ಕೊಟ್ಟರೆ ಅವನು ಎರಡೇ ವರ್ಷದಿಂದ ಒಂದೇ ವರ್ಷದಿಂದ ನಾನು ಪ್ರಾಕ್ಟೀಸ್ ಮಾಡುತ್ತಿದ್ದೇನೆಎಂದು ಹೇಳುತ್ತಾರೆ. ಆಗ ಮತ್ತೆ ಡಿಸ್ಕ್ರಿಶನ್ ಆಫೀಸರ್ ಪ್ರೂವ್ ಮಾಡಬೇಕಾಗುತ್ತದೆ. ಟ್ಯಾಕ್ಸ್ ಕೊಡುವವರೂ ಒಂದು ಪ್ರೂವ್ ಮಾಡಬೇಕಾಗುತ್ತದೆ. ಆದ್ದರಿಂದ ದಯವಿಟ್ಟು ಇನ್‌ಕಂ ಟ್ಯಾಕ್ಸ್ ಪೇಯರ್ಸ್‌ಗೆ ಯಾವುದೇ ವೃತ್ತಿಯಾಗಲಿ ವೃತ್ತಿ ತೆರಿಗೆ ಅನ್ವಯವಾಗುತ್ತದೆ ಎಂದು ಏನಾದರೂ ನಿಯಮ ಮಾಡುವುದಕ್ಕೆ ಆಗುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಎಸ್.ಬಂಗಾರಪ್ಪ:- ಮಾನ್ಯ ಅಧ್ಯಕ್ಷರೆ, It is a good suggestion for consideration. ಏಕೆಂದರೆ ಐಜಿ ವಿಚಾರ ಗಮನದಲ್ಲಿಟ್ಟು ಅದನ್ನು ನೋಡುವುದು. We will certainly examine it. ಈ ಮಧ್ಯೆ ಕಲ್ಯಾಣ ಮಂಟಪದ ವಿಚಾರದಲ್ಲಿ ಒಂದು ಹೇಳಿದರು. ಬೇಕಾದರೆ ಪಟ್ಟಣ , ನಗರ ಪ್ರದೇಶದಲ್ಲಿ ಇರಲಿ, ಆದರೆ ಗ್ರಾಮೀಣ ಪ್ರದೇಶಕ್ಕೆ ತೊಂದರೆಯಾಗುತ್ತದೆ ಎಂದು ಹೇಳಿದರು. ಇಲ್ಲಿ ಏನಾಗಿದೆ, ಕನಕಪುರ ರಸ್ತೆಯಲ್ಲಿ ಮೊನ್ನೆ ಮದುವೆಗೆ ಹೋದಾಗ ಒಂದು ಕಲ್ಯಾಣ ಮಂಟಪ ನೋಡಿದೆ. ಆಗ ನನ್ನ ಮನಸ್ಸಿಗೆ ಬಂತು ಅದು ಕಾರ್ಪೊರೇಷನ್ ಲಿಮಿಟ್ ದಾಟಿ ಆ ಕಡೆ ಹೋಗಿದೆ. What they charge there, is equal to the charge of the Kalyana Mantapa owners within the corporation area here. ಜಾಸ್ತಿ ರೇಟ್ ಇದೆ ಎಂದು ನಮಗೆ ಅಲ್ಲಿ ಗೊತ್ತಾಗುತ್ತದೆ. ಅದೇರೀತಿ ಎಲ್ಲ ಹಳ್ಳಿ, ತಾಲ್ಲೂಕು ಮಟ್ಟದಲ್ಲಿ ಇರುತ್ತದೆಂದು ನಾನು ಹೇಳುವುದಕ್ಕಾಗುವುದಿಲ್ಲ. ಅದು ಎಕ್ಸ್‌ಪ್ಷನ್ ಬೆಂಗಳೂರಿನಲ್ಲಿ ಇರುವುದು ಸಾಕಾಗುವುದಿಲ್ಲ ಎಂದು ಅವರು ಊರ ಹೊರಗೆ ಹೋಗಿಬಿಟ್ಟಿದ್ದಾರೆ. ನಮ್ಮ ಆತ್ಮಾನಂದಗ ಸಂಬಂಧಿರುವವರ ಒಂದು ಮದುವೆ ಕಾರ್ಪೊರೇಷನ್ ಏರಿಯಾ ದಾಟಿ ಹೊರಗಡೆ ಇರುವ ಕಲ್ಯಾಣ ಮಂಟಪದಲ್ಲಿ ನಡೆಯಿತು. ಮಾನ್ಯ ಅಶ್ವತ್ಥರೆಡ್ಡಿಯವರದು ಕೂಡ ಕಾರ್ಪೊರೇಷನ್ ಮಿತಿ ದಾಟಿ ಹೊರಗೆ ಇರುವುದು. ಏತಕ್ಕೆಂದರೆ ಇಲ್ಲಿ ಜಾಗ ಸಿಗುವುದಿಲ್ಲ ಎಂದು ಎಷ್ಟು ಡಿಮ್ಯಾಂಡ್ ಇದೆ. ಕೆಲವರು ಆ ಡೇಟ್ಸೆಲ್ಲ ತೆಗೆದುಕೊಂಡು ಹೋಗಿ ಮೊದಲೇ ಬುಕ್ ಮಾಡಿಟ್ಟುಕೊಂಡು ಅದನ್ನು ಬೇರೆಯವರಿಗೆ ಮಾರಾಟಮಾಡುತ್ತಾರಂತೆ.

ಶ್ರೀ ಸಿ.ಭೈರೇಗೌಡ:- ಅವರು ಹೇಳುವುದು ವಾಸ್ತವ, ಬೆಂಗಳೂರು ಸುತ್ತಮುತ್ತ ಇದೆ. ಕನಕಪುರ ರಸ್ತೆಯಲ್ಲಿರುವುದು ಒಂದೇ ಅಲ್ಲ. ಈ ಕಡೆ ಯಲಹಂಕದ ಕಡೆ ಹೋದರೂ ಇವೆ. ಮೈಸೂರು ರಸ್ತೆಯಲ್ಲೂ ಇವೆ. ಅದಕ್ಕೆ ನನ್ನ ಸಲಹೆ ಏನೆಂದರೆ ಬೆಂಗಳೂರು ಅಥವಾ ದೊಡ್ಡ ದೊಡ್ಡ ಪಟ್ಟಣಗಳ ಕಾರ್ಪೊರೇಷನ್ ವ್ಯಾಪ್ತಿಗೆ 20-25 ಕಿ.ಮೀ ವ್ಯಾಪ್ತಿ ಬಿಟ್ಟು ಉಳಿದ ಕಡೆ ಲಾಗು ಇಲ್ಲ ಎಂದು ಮಾಡಿ . ಹಾಗೆ ಫಿಕ್ಸ್ ಮಾಡಿ 20-25 ಕಿ.ಮೀ ಒಳಗಿರುವುದಕ್ಕೆ ನೀವು ರಿಯಾಯಿತಿ ಕೊಡಬೇಡಿ. ತಾಲ್ಲೂಕು ಮತ್ತು ಹಳ್ಳಿ ಮಟ್ಟದಲ್ಲಿರುವುದಕ್ಕೆ ದಯವಿಟ್ಟು ಮುಟ್ಟುವುದಕ್ಕೆ ಹೋಗಬೇಡಿ. ಈಗ ಅನೇಕ ಕಡೆ ಹಳ್ಳಿಗಳಲ್ಲೂ ಆಗಿವೆ. ಆದರೂ ಕೂಡ ಎರಡೂವರೆ ಸಾವಿರ ರೂಪಾಯಿ ಅಂದರೆ ಅಲ್ಲಿವರ್ಷವೆಲ್ಲ ಎರಡೂವರೆ ಸಾವಿರ ರೂಪಾಯಿ ಆಗುವುದಿಲ್ಲ.ಅವರಿಗೆ ನೀವು ಎರಡೂವರೆ ಸಾವಿರ ತೆರಿಗೆ ಹಾಕುತ್ತೇವೆ ಅಂದರೆ ಅವರು ಏನೂ ಮಾಡುವುದಕ್ಕೆ ಆಗುವುದಿಲ್ಲ.

ನನ್ನ ಕ್ಷೇತ್ರದಲ್ಲಿ ಕೆಲವು ಕಡೆ ದೇವಸ್ಥಾನಗಳಿಗೆ ಅಟ್ಯಾಚಾಗಿ ಕಲ್ಯಾಣ ಮಂಟಪ ಕಟ್ಟಿದ್ದಾರೆ. ಅವಕ್ಕೂ ಕೂಡ ಎರಡೂವರೆ ಸಾವಿರ ರೂಪಾಯಿ ಎಂದರೆ ಆ ದೇವಸ್ಥಾನವನ್ನೂ ಮುಚ್ಚಬೇಕಾಗುತ್ತದೆ.

ಶ್ರೀ ಎಸ್.ಬಂಗಾರಪ್ಪ:- ಮಾನ್ಯ ಭೈರೇಗೌಡರಿಗೆ ನಾನು ಹೇಳುವುದೇನೆಂದರೆ, ಬಡವರಿಗೆ ಫ್ರೀಯಾಗಿ ಕೊಡಲು ವ್ಯವಸ್ಥೆ ಮಾಡಿದರೆ ಪಟ್ಟಣದವರಂತೂ ಫ್ರೀಯಾಗಿ ಕೊಡುವುದಿಲ್ಲ, ಅದನ್ನು ಮರೆತುಬಿಡಿ, ಅದರಲ್ಲಿ ನಮ್ಮ ನಿಮ್ಮ ಅಭಿಪ್ರಾಯ ಒಂದೇನೆ, ಅದರಲ್ಲಿ ವ್ಯತ್ಯಾಸ ಬರುವುದಿಲ್ಲ. ಗ್ರಾಮೀಣ ಪ್ರದೇಶದ ಬಡವರಿಗೆ ಅರ್ಧರೇಟು, ಕಾಲು ರೇಟು, ಇಲ್ಲವೇ ಫ್ರೀನೋ, Something like that.

ಶ್ರೀ ಸಿ.ಭೈರೇಗೌಡ:- ನಾನು ಮಧ್ಯೆ ಮಧ್ಯೆ ಮಾತನಾಡುತ್ತಿದ್ದೇನೆ ದಯವಿಟ್ಟು ಕ್ಷಮಿಸಿ. ಅಲ್ಲಿರುವ ಮಂಟಪಗಳಿಗೆ 100-150-300 ರೂಪಾಯಿ ಆಗುತ್ತದೆ. It is almost free. ಆದುದರಿಂದ ತಮಗೆ ಬಂದರೂ ಇಡೀ ರಾಜ್ಯದಲ್ಲಿ ಒಂದು 100 ಆ ರೀತಿ ಕಲ್ಯಾಣ ಮಂದಿರಗಳು ಸಿಗಬಹುದು. ನಾವು ಏನು ಅಂಥ ಕಲ್ಯಾಣ ಮಂಟಪಗಳಿಗೆ ವಿನಾಯಿತಿಯನ್ನು ಕೊಡಬೇಕೆಂದು ಹೇಳುತ್ತಿದ್ದೆವೋ ಅಂಥ ಕಲ್ಯಾಣ ಮಂಟಪಗಳು ಸುಮಾರು 100 ಸಿಗಬಹುದು. ಒಂದು ನೂರಕ್ಕೆ ಸುಮಾರು ಎರಡೂವರೆ ಸಾವಿರವೆಂದರೂ ಕೂಡ ಸರ್ಕಾರಕ್ಕೆ ಬರಬೇಕಾದ ಆದಾಯ ಸುಮಾರು ಎರಡೂವರೆ ಲಕ್ಷ ರೂಪಾಯಿಯಾಗುತ್ತದೆ. ಈ ಎರಡೂವರೆ ಲಕ್ಷಕ್ಕೆ ಏಕೆ ನಾವು ಇಷ್ಟೊಂದು ಚರ್ಚೆ ಮಾಡಬೇಕು. ದಯಮಾಡಿ ಅದನ್ನು ಕೈಬಿಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಉಪಧ್ಯಕ್ಷರೇ, ಬೇಕಾದರೆ ಪ್ರೈವೇಟ್ ಆಗಿ ಅಥವಾ ಇಂಡಿವಿಜುವಲ್ಲಾಗಿ ಯಾರಾದರೂ ಆ ರೀತಿ ಮಾಡಿದರೆ ಅದಕ್ಕೆ ಅನ್ವಯ ಮಾಡಿ. ಆದರೆ ಇವತ್ತು ತಾಲ್ಲೂಕು ಮಟ್ಟದಲ್ಲಿರತಕ್ಕ ಈ ರೀತಿ ಸೇವೆ ಮಾಡತಕ್ಕ ಸಂಘ-ಸಂಸ್ಥೆಗಳೇನು ಇವೆ, ಇವುಗಳ ಬಗ್ಗೆ ಸಂದರ್ಭ ನೋಡಿಕೊಂಡು ಮ್ಯಾನೇಜ್‌ಮೆಂಟ್‌ನವರು ತೀರ್ಮಾನ ತೆಗದುಕೊಂಡು ಎಲ್ಲ ವ್ಯವಸ್ಥೆ ಮಾಡುತ್ತಿದ್ದಾರೆ. ಅದಕ್ಕೋಸ್ಕರ ಪ್ರೈವೇಟಾಗಿ ಇಂಥ ದೊಡ್ಡ ದೊಡ್ಡವರೇನಿದ್ದಾರೆ ಬೆಂಗಳೂರಿನ ಸುತ್ತಮುತ್ತ ಅಥವಾ ಬೆಂಗಳೂರಿನ ಗ್ರಾಮಾಂತರ ಪ್ರದೇಶದಲ್ಲಿ ಅದನ್ನು ಕಂಡಿದ್ದೇವೆಂದು ಹೇಳುತ್ತಿದ್ದೀರಲ್ಲ ಅದಕ್ಕೆ ಅನ್ವಯವಾಗಬೇಕೆಂಬುದು ನಿಮಗೆ ಇಚ್ಛೆ ಇದ್ದರೆ. ತಾಲ್ಲೂಕು ಮಟ್ಟದಲ್ಲಿರತಕ್ಕ ಯಾವುದೇ ಸಂಘ ಸಂಸ್ಥೆಗಳವರು ಮಾಡತಕ್ಕ ಈ ಒಂದು ಕಲ್ಯಾಣ ಮಂಟಪಕ್ಕೆ, ಮದುವೆಯ ಮಂಟಪಕ್ಕೆ ಅದನ್ನು ಅನ್ವಯಿಸುವುದಿಲ್ಲವೆಂದು ತಾವು ತಂದರೆ ಬಹುಶ: ತಾಲ್ಲೂಕು ಮಟ್ಟದಲ್ಲಿ ಕಲ್ಯಾಣ ಮಂಟಪಗಳು ಉಳಿದುಕೊಳ್ಳುತ್ತವೆ. ಇಲ್ಲದಿದ್ದರೆ ಬಡಬಗ್ಗರಿಗೆ ಫ್ರೀಯಾಗಿ ಕೊಡತಕ್ಕ ಅಥವಾ 50,100 ರೂಪಾಯಿಗೆ ಕೊಡತಕ್ಕ 60x40 ಹಾಲ್‌ನಲ್ಲಿರುವಂಥಾದ್ದನ್ನು ಕಲ್ಯಾಣ ಮಂಟಪ ಎಂದು ಏನು ಕರೆಯುತ್ತೇವೆ. ಅದಕ್ಕೆ ತೊಂದರೆಯಾಗುತ್ತದೆ. ಇದರ ಬಗ್ಗೆ ನಿರ್ದಿಷ್ಟವಾಗಿ ಇಲ್ಲದೇ ಇರುವುದರಿಂದ ನೀವು ಇದನ್ನು ಪ್ರೈವೇಟ್ ನವರಿಗೆ ಬೇಕಾದರೆ ಅನ್ವಯ ಮಾಡಿ. ಆಥರೆ ಬೇರೆ ಸಂಘ-ಸಂಸ್ಥೆಗಳವರು ನಡೆಸತಕ್ಕ ಹಾಗೂ ತಾಲ್ಲೂಕು ಮಟ್ಟದ ಕೆಳಗಡೆ ಇರತಕ್ಕ ಸಂಘ-ಸಂಸ್ಥೆಗಳಿಗೆ ಮತ್ತು ಬೇರೆಯವರಿದ್ದರೆ ಅವರಿಗೆ ಇದು ಅನ್ವಯವಾಗುವುದಿಲ್ಲವೆಂದು ಮಾಡಿದರೆ ಮಾತ್ರ ಅವರುಗಳು ಉಳಿದುಕೊಳ್ಳುತ್ತಾರೆ. ಅದರ ಮೇಲೆ ತಾವು ಏನು ಬೇಕಾದರೂ ಮಾಡಿಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಇವತ್ತಿನ ಪರಿಸ್ಥಿತಿಯಲ್ಲಿ ಅನೇಕ ಕಡೆಗಳಲ್ಲಿ ಕಲ್ಯಾಣ ಮಂಟಪಗಳ ಅಭಾವವಿದೆ. ಉದಾಹರಣೆ ಹೇಳುವುದಾದರೆ ಅನೇಕ

ತಾಲ್ಲೂಕುಗಳಲ್ಲಿ ಕಲ್ಯಾಣ ಮಂಟಪಗಳೇ ಇಲ್ಲ. ತಮಗೆ ಗೊತ್ತಿರುವಹಾಗೆ, ಚನ್ನಪಟ್ಟಣದ ರಸ್ತೆಯಲ್ಲಿ ತಾವು ಹೋಗುವಾಗ ನೋಡಿರಬಹುದು. ಮದುವೆ ಸಂದರ್ಭ ಬಂದರೆ ಕೆಂಗಲ್ ಆಂಜನೇಯ ಸ್ವಾಮಿ ದೇವಸ್ಥಾನಗಳ ಹತ್ತಿರ ಪ್ರತಿ ದಿನ 20-25-30 ಮದುವೆಗಳು ನಡೆಯುತ್ತಿರುತ್ತವೆ ಮುಂದೆ ಇನ್ನೊಂದು ಆಂಜನೇಯ ಸ್ವಾಮಿ ದೇವಸ್ಥಾನದ ಹತ್ತಿರ ಕೂಡ ನಡೆಯುತ್ತಿರುತ್ತವೆ. ಈ ರೀತಿ ದೇವಸ್ಥಾನಗಳ ಹತ್ತಿರ , ಆರಳಿಮರದ ಕೆಳಗಡೆ ಸಿಕ್ಕಾಪಟ್ಟೆ ಮದುವೆಗಳು ನಡೆಯುತ್ತಿರುತ್ತವೆ. ಆದುದರಿಂದ ಸರ್ಕಾರದವರು ಕಲ್ಯಾಣ ಮಂಟಪಗಳ ಮೇಲೆ ತೆರಿಗೆಯನ್ನು ಹಾಕುವ ಬದಲು ಹಳ್ಳಿಗಳಲ್ಲಿ, ಹೋಬಳಿ ಆಥವಾ ತಾಲ್ಲೂಕುಗಳಲ್ಲಿ ಸರ್ಕಾರದಿಂದ ಕಲ್ಯಾಣ ಮಂಟಪಗಳನ್ನು ಕಟ್ಟಿಸತಕ್ಕ ಯೋಚನೆಯನ್ನು ಮಾಡತಕ್ಕದ್ದು ಒಳ್ಳೆಯದು. ಅನೇಕ ಕಡೆ ಕಲ್ಯಾಣ ಮಂಟಪಗಳಿಲ್ಲ. ಕೆಲವು ಕಲ್ಯಾಣ ಮಂಟಪಗಳಲ್ಲಿ ಎರಡು ಮೂರು ದಿವಸ ಮದುವೆ ಮಾಡಿದರೂ 150-200 ರೂಪಾಯಿ ಬಾಡಿಗೆ ಇದೆ. ನೀವು ಹೇಳಿದಂತೆ ಕನಕಪುರ ರಸ್ತೆಯಲ್ಲಿ ಇರತಕ್ಕ ಒಂದೊಂದು ಕಲ್ಯಾಣ ಮಂಟಪಕ್ಕೆ ಒಂದು ದಿನಕ್ಕೆ 35 ಸಾವಿರ ರೂಪಾಯಿ ಬಾಡಿಗೆಯನ್ನು ತೆಗೆದುಕೊಳ್ಳುವುದುಂಟು. ಅಲ್ಲಿ ಸಿನಿಮಾ ಥಿಯೇಟರ್‌ಗಿಂತ ಹೆಚ್ಚು ಬಾಡಿಗೆ ಉಂಟು. ಆದುದರಿಂದ ಇಂಥ ಕಲ್ಯಾಣ ಮಂಟಪಗಳಿಗೆ ಹೆಚ್ಚಿನ ರೀತಿಯಲ್ಲಿ ತೆರಿಗೆಯನ್ನು ಹಾಕಬೇಕೆಂದು ನಮ್ಮ ಮನಸ್ಸಿನಲ್ಲಿಯೂ ಇತ್ತು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನೀವು ತೆರಿಗೆಯನ್ನು ಹಾಕುವಾಗ ಸಾರಾಸಗಟಾಗಿ ತಾಲ್ಲೂಕು ಮತ್ತು ಹೋಬಳಿಯಲ್ಲಿರತಕ್ಕ ಎಲ್ಲಾ ಕಲ್ಯಾಣ ಮಂಟಪಗಳಿಗೂ ತೆರಿಗೆಯನ್ನು ಹಾಕತಕ್ಕುದ್ದು ಸರಿಯಲ್ಲ, ಅದು ಒಳ್ಳೆಯ ಮಾರ್ಗವಲ್ಲ. ದಯಮಾಡಿ ನಗರ ಸಭೆಯ ಸರಹದ್ದಿನಲ್ಲಿರತಕ್ಕ ಜಿಲ್ಲಾ ಕೇಂದ್ರದಲ್ಲಿರತಕ್ಕ ಕಲ್ಯಾಣಮಂಟಪಗಳಿಗೆ ಅದನ್ನು ಅನ್ವಯಿಸುವುದಕ್ಕೆ ಯೋಚನೆಯನ್ನು ಮಾಡಿ ಆ ಬಗ್ಗೆ ಒಂದು ತೀರ್ಮಾನಕ್ಕೆ ಬರತಕ್ಕದ್ದು ಒಳ್ಳೆಯದು.

ಶ್ರೀ ಬಿ.ಹೆಚ್.ಬನ್ನಿಕೋಡ್:- ಮಾನ್ಯ ಅಧ್ಯಕ್ಷರೇ, ತಾವು ಮೊದಲೆ ಗಮನಹರಿಸಿದ್ದರೆ ಈ ರೀತಿ ಆಗುತ್ತಿರಲಿಲ್ಲ. ತಾವು ಇದರ ಬಗ್ಗೆ ಗಮನ ಹರಿಸಿ ಈಗಲಾದರೂ ಇದರ ಬಗ್ಗೆ ಯೋಚನೆ ಮಾಡಿ ಯೋಗ್ಯವಾಗಿ ಅದನ್ನು ಮಾಡಬೇಕು.

ಶ್ರೀ ಬಸವರಾಜ ರಾಯರೆಡ್ಡಿ:- ಉಪಾಧ್ಯಕ್ಷರೇ, ಕಲ್ಯಾಣ ಮಂಟಪಗಳಿಗೆ ತೆರಿಗೆಯನ್ನು ಹಾಕುತ್ತಿರುವುದು ಬಹಳ ಒಳ್ಳೆಯದು. ಆದರೆ ಆ ತೆರಿಗೆ ಬಹಳ ಕಡಿಮೆಯಾಯಿತು. ಅದು ಕೇವಲ ಎರಡೂವರೆ ಸಾವಿರವಾಗುತ್ತದೆ. ಉದಾಹರಣೆಗೆ ಬೆಂಗಳೂರಿನಲ್ಲಿ ಇದು ಒಂದು ದೊಡ್ಡ ದಂಧೆಯಾಗಿಬಿಟ್ಟಿದೆ. ಈಗ ದೊಡ್ಡ ದೊಡ್ಡ ಕಲ್ಯಾಣಮಂಟಪಗಳಾದ ದಯಾನಂದ ಸಾಗರ ಕಲ್ಯಾಣ ಮಂಟಪದಲ್ಲಿ ಪ್ರತಿ ದಿನಕ್ಕೆ 25 ಸಾವಿರ ರೂಪಾಯಿ ಬಾಡಿಗೆಯನ್ನು ತೆಗೆದುಕೊಳ್ಳುತ್ತಾರೆ. ನಾನೇ ಅಲ್ಲಿ ಕೊಟ್ಟಿದ್ದೇನೆ. ಈಗ 35 ಸಾವಿರ ಆಗಿರಬಹುದು. ಆಮೇಲೆ ಶ್ರೀನಿವಾಸ ಕಲ್ಯಾಣ ಮಂಟಪದಲ್ಲಿ 15 ಸಾವಿರ, ಚಾಮರಾಜ ಕಲ್ಯಾಣ ಮಂಟಪದಲ್ಲಿ 20 ಸಾವಿರ ಬಾಡಿಗೆ ಇದೆ. ಈ ರೀತಿ ಒಂದೊಂದು ಕಲ್ಯಾಣ ಮಂಟಪದಲ್ಲಿ 20-25 ಸಾವಿರ ರೂಪಾಯಿ ಒಂದು ದಿನಕ್ಕೆ ದುಡಿಯುವುದಾದರೆ, ಅಂದರೆ ಕಡೆಯ ಪಕ್ಷ ಒಂದು ಕಲ್ಯಾಣ ಮಂಟಪದಲ್ಲಿ 150 ರಿಂದ 200 ದಿನದವರೆಗೆ ಮದುವೆಗಳು ಆಗುತ್ತದೆ. ಹಣವನ್ನು ಕೊಡುತ್ತೇವೆಂದರೂ ಜಾಗ ಸಿಕ್ಕುವುದಿಲ್ಲ. ಆದುದರಿಂದ ಇಲ್ಲಿ ಕೊನೆಪಕ್ಷ 10 ಪರ್‌ಸೆಂಟ್ ಟ್ಯಾಕ್ಸ್‌ನ್ನು ಹಾಕಬೇಕು. ಪ್ರತಿದಿನ ಯಾರ್ಯಾರು ಹೊಸದಾಗಿ ಈರೀತಿ ಮಾಡುತ್ತಾರೋ ಅದರ ಮೇಲೆ ದಯವಿಟ್ಟು ಹತ್ತು ಪರ್ಸೆಂಟ್ ಟ್ಯಾಕ್ಸ್ ಹಾಕಬೇಕು. ಈಗ 25 ಸಾವಿರ ಬಾಡಿಗೆ ಇದ್ದರೆ, 10 ಪರ್‌ಸೆಂಟ್ ಎಂದರೆ ಎರಡೂವರೆ ಸಾವಿರ ರೂಪಾಯಿ ಸರ್ಕಾರಕ್ಕೆ

ಬರಲಿ, ಇದರಿಂದ ಸರ್ಕಾರಕ್ಕೆ ಅನುಕೂಲವಾಗುತ್ತದೆ. ಆ ಬಗ್ಗೆ ದೊಡ್ಡ ದಂಧೆ ನಡುಯುತ್ತಿದೆ. ಇದುವರೆಗೆ ಯಾವುದೇ ತೆರಿಗೆ ಇಲ್ಲದೆ, ಜನರ ಹೆಸರಿನಲ್ಲಿ ಇವತ್ತು ಕಲ್ಯಾಣ ಮಂಟಪಗಳಲ್ಲಿ ಕೊಳ್ಳೆಹೊಡೆಯುತ್ತಿದ್ದಾರೆ. ಆದುದರಿಂದ ದಯಮಾಡಿ ತೆರಿಗೆಯನ್ನು ಅಲ್ಲಿ ಹೆಚ್ಚು ಮಾಡಿ. ಅದರ ಜೊತೆಗೆ ಅಲ್ಲಿ ಎ,ಬಿ,ಸಿ,ಡಿ ಕ್ಯಾಟಗರಿ ಮಾಡಿ ಯಾವ್ಯಾವ ಕಲ್ಯಾಣ ಮಂಟಪಗಳಿಗೆ ಎಷ್ಟೆಷ್ಟು ತೆರಿಗೆಯನ್ನು ಹಾಕಬೇಕೆಂದು ಮಾಡಿ. ಮಾನ್ಯ ಸದಸ್ಯ ಸ್ನೇಹಿತರಾದ ವಾಟಾಳ್‌ನಾಗರಾಜ್‌ರವರು ಹೇಳಿದಂತೆ ಬಡಬಗ್ಗರಿಗೆ ಸರ್ಕಾರದಿಂದ ಉಚಿತವಾಗಿ ಅಂದರೆ ನಿಮಿಷಂ ಚಾರ್ಜ್ ಏನಾದರೂ ಮಾಡುವುದಕ್ಕೆ ಸಾಧ್ಯವಾದರೆ ಅದನ್ನು ಮಾಡಿಕೊಡಿ. ತೆರಿಗೆಯನ್ನು ಜಾಸ್ತಿ ಮಾಡಿ . ಇದನ್ನು ಶ್ರೀಮಂತರು ಎಲ್ಲೆಲ್ಲಿ ಕಲ್ಯಾಣಮಂಟಪಗಳಲ್ಲಿ ಮದುವೆಮಾಡಿದ್ದಾರೆ ಅಲ್ಲಿ ಮಾಡಬೇಕು.

ಪ್ರೊ.ಎಂ.ಡಿ.ನಂಜುಂಡಸ್ವಾಮಿ :- ಮಾನ್ಯ ಉಪಾಧ್ಯಕ್ಷರೆ, ಏನು ಬಹಳ ಕಲ್ಯಾಣ, ಕಲ್ಯಾಣ ಮಂಟಪದ ಬಗ್ಗೆ ಚರ್ಚೆ ನಡೆಯುತ್ತಿದೆ. ಕಲ್ಯಾಣ ಮಂಟಪದ ಮೇಲೆ ತೆರಿಗೆಯನ್ನು ಹಾಕುವುದೂ ಒಂದೆ ಕಲ್ಯಾಣದ ಮೇಲೆ ತೆರಿಗೆಯನ್ನು ಹಾಕುವುದೂ ಒಂದೆ. ನನ್ನ ವಿಚಾರವೇ ಬೇರೆ ಇದೆ. ಕೆಲವರೆಲ್ಲ ಕಲ್ಯಾಣ ಮಂಟಪವನ್ನು ಕಟ್ಟಿಸಿ, ಕಲ್ಯಾಣ ಮಂಟಪವನ್ನು ಕಟ್ಟಿಸಿ ಎಂದೆ ಹೇಳುತ್ತಿದ್ದಾರೆ. ನಮಗೆ ಬೇರೆ ಕೆಲಸಗಳು ಇವೆ. ಕಲ್ಯಾಣಗಳು ಎಷ್ಟಾಗುತ್ತಿವೆಯೋ ಅದರ ಸಂಖ್ಯೆಗೆ ಅನುಗುಣವಾಗಿ ಕಲ್ಯಾಣ ಮಂಟಪಗಳು ಇಲ್ಲ ನಿಜ. ಆದರೆ ಕಲ್ಯಾಣಗಳು ನಿಂತಿಲ್ಲ, ಕಲ್ಯಾಣಗಳು ಆಗುತ್ತಾ ಇವೆ. ಆದರೆ ಕಲ್ಯಾಣ ಮಂಟಪದಲ್ಲಿ ಕಲ್ಯಾಣವಾಗಬೇಕು ಎಂದು ಏನಾದರೂ ವಿಚಾರ ಇದೆಯೇ? ನನಗಂತೂ ಗೊತ್ತಾಗುತ್ತಿಲ್ಲ. ಕಲ್ಯಾಣ ಮಂಟಪದಲ್ಲೇ ಕಲ್ಯಾಣ ಆಗಬೇಕು ಎಂದು ಏನಾದರೂ ಇದೆಯೋ? ಅಥವಾ ನಾವೇನಾದರೂ ಬೇರೆ ಕೆಲಸಗಳಲ್ಲಿನಮ್ಮ ಸಾಂಸ್ಕೃತಿಕ ಚಟುವಟಿಕೆಯನ್ನು ಮುಂದುವರಿಸುವ ಆಲೋಚನೆ ಯನ್ನಾದರೂ ಮಾಡೋಣವೆ? ಆಗ ಕಲ್ಯಾಣ ಆಗಬಹುದು.

ಶ್ರೀ ಬಸವರಾಜ ರಾಯರೆಡ್ಡಿ :- ನಗರದ ಜನ ಅಲ್ಲಿ ಆದರೆ ಮಾತ್ರ ಕಲ್ಯಾಣ ಎಂದು ತಿಳಿದುಕೊಳ್ಳುತ್ತಾರೆ. ಅವರಿಗೆ ಏನು ಹೇಳುತ್ತೀರಿ, ನಗರದ ಜನರಿಗೆ ಏನು ಹೇಳುತ್ತೀರಿ. ರಿಜಿಸ್ಟರ್ ಆಫೀಸ್‌ಗಳು ಜಾಸ್ತಿಯಾಗಿವೆ.

ಶ್ರೀ ಎಸ್.ಬಂಗಾರಪ್ಪ :- ಪ್ರೊಫೆಸರ್‌ರವರನ್ನು ಯಾರೂ ಡಿಸ್ಟರ್ಬ್ ಮಾಡಬೇಡಿ. ಈಗ ಅದಕ್ಕೆ ಏನೋ ಒಂದು ಯೋಚನೆ, ಏನೋ ವ್ಯಾಖ್ಯಾನ ಶುರು ಆದಹಾಗೆ ಕಾಣಿಸುತ್ತದೆ. ದಯವಿಟ್ಟು ಆವಿವರಗಳು ಸಂಪೂರ್ಣವಾಗಿ ಒಡಮೂಡಿ ಬರಲಿ.

ಪ್ರೊ.ಎಂ.ಡಿ.ನಂಜುಂಡಸ್ವಾಮಿ :- ತಾವು ಅಂತಹ ಚಟುವಟಿಕೆಯಲ್ಲಿ ಭಾಗವಹಿಸಿದ್ದೀರಿ. ನಾವು ವೈಜ್ಞಾನಿಕ ವಿವಾಹಗಳು, ಸರಳ ವಿವಾಹಗಳು ಬಗ್ಗೆ ಆಲೋಚನೆ ಮಾಡುವುದಕ್ಕೆ ಸಹಾಯಕವಾಗೋಣವೋ ಅಥವಾ ಅವೈಚಾರಿಕವಾಗಿ, ಅವೈಜ್ಞಾನಿಕವಾಗಿ ಕೆಲಸಕ್ಕೆ . ಬಾರದ ಸಂಪ್ರದಾಯಗಳಿಗೆ ಅಂಟಿಕೊಂಡು ದುಂದುಗಾರಿಕೆಮಾಡುವಂತಹ ಹವ್ಯಾಸಗಳಿಗೆ ಉತ್ತೇಜನ ಕೊಡುವಂತಹ ಒಂದು ಕೆಲಸವನ್ನು ಮಾಡೋಣವೋ. ಅದನ್ನು ನಾವು ತೀರ್ಮಾನಮಾಡಬೇಕು. ಇದರ ಬಗ್ಗೆ ಬಹಳ ದಿವಸಗಳಿಂದ ನಾವು ಈ ಚಟುವಟಿಕೆಯನ್ನು ಮಾಡುತ್ತಿದ್ದೇವೆ. ಆ ಕಾರಣ ಎಲ್ಲಿ ವ್ಯಾಪಾರದ ದೃಷ್ಟಿಯಿಂದ ಕಲ್ಯಾಣಮಂಟಪಗಳು ನಡೆಯುತ್ತಿವೆ. ಅದಕ್ಕೆ ನೀವು ತೆರಿಗೆ ಹಾಕಿ, ಅದಕ್ಕೆ ಏನಿಲ್ಲ, ಆದರೆ ಎಲ್ಲೋ ಛತ್ರದಲ್ಲಿ ಮಾಡುವ ಮದುವೆಗಳಿಗೆ ಅದಕ್ಕೆಲ್ಲಾ ನೀವು ತೆರಿಗೆ ಹಾಕುವ ಹಾಗಿಲ್ಲ, ಹಾಕಲೂ ಬಾರದು. ಅದು ಕಲ್ಯಾಣಕ್ಕೇ ತೆರಿಗೆ ಹಾಕಿದಹಾಗೆ. ಅದು ಬೇರೆ

ವಿಚಾರ. ಆದರೆ ನಾನು ಏತಕ್ಕೆ ಎದ್ದು ನಿಲ್ಲಬೇಕಾಯಿತು ಅಂದರೆ, ಕೆಲವು ಸದಸ್ಯರು ಸರ್ಕಾರದ ಖರ್ಚಿನಲ್ಲಿ ಕಲ್ಯಾಣ ಮಂಟಪವನ್ನು ಕಟ್ಟಿಸಿ ಎಂದು ಸಲಹೆಯನ್ನು ಕೊಡುತ್ತಿದ್ದರು. ಅದಕ್ಕೆ ನಾನು ಸಂಪೂರ್ಣವಾಗಿ ವಿರೋಧ ಮಾಡುತ್ತಿದ್ದೇನೆ. ಅದಕ್ಕೋಸ್ಕರ ನಾನು ಎದ್ದು ನಿಂತೆ. ನಾವು ಮಾತನಾಡುತ್ತಿರುವುದು ಕಲ್ಯಾಣ ಬಗ್ಗೆ. ಆದರೆ ಇದು ಮಸೂದೆಗೆ ಸಂಬಂಧಪಟ್ಟಿಲ್ಲ. ರಿಜಿಸ್ಟ್ರೇಷನ್ ಅನ್ನು ಕಂಪಲ್‌ಸರಿಯಾಗಿ ಮಾಡಿ. ಇದನ್ನು ಕಂಪಲ್ಸರಿ ಮಾಡಿದರೆ. It will have an indirect effect on the growing demand for kalyana mantaps. ಕಲ್ಯಾಣ ಮಂಟಪಕ್ಕೆ ಯಾರು ಹೋಗುವುದಿಲ್ಲ. ಪುರೋಹಿತರನ್ನು ಹಿಡಿದುಕೊಂಡು ಮಾಡಿಕೊಳ್ಳುತ್ತಾರೆ. ಆ ಕಾರಣದಿಂದ ಅದಕ್ಕೆ ಬೇರೆಯಾವುದಾದರೂ ತಿದ್ದುಪಡಿಯನ್ನು ತನ್ನಿ.

ಶ್ರೀ ಕರಿಯಣ್ಣ:- ನಮ್ಮ ಮಾನ್ಯ ಹಿರಿಯ ಸದಸ್ಯರಾದಂತಹ ಪ್ರೊ: ನಂಜುಂಡ ಸ್ವಾಮಿಯವರು ಕಲ್ಯಾಣ ಮಂಟಪಗಳೇ ಬೇಡ ಎಂದು ಹೇಳಿದರು. ಕಲ್ಯಾಣಮಂಟಪದಲ್ಲಿ ಸುಖವಾಗಿ, ಬಹಳ ಕ್ಲಿನ್ ಆಗಿ, ಎಲೆಯನ್ನು ಟೇಬಲ್ ಮೇಲೆ ಹಾಕಿಕೊಂಡು ಕುಳಿತುಕೊಂಡು ಊಟಮಾಡಿಕೊಂಡು ಹೋಗುತ್ತಾರೆ. ಇನ್ನು ಹಳ್ಳಿಯಲ್ಲಿರತಕ್ಕ ಜನ ಮಣ್ಣು ಮತ್ತು ಅನ್ನವನ್ನು ಜೊತೆಯಲ್ಲಿ ತಿನ್ನುತ್ತಿದ್ದಾರೆ. ಹಳ್ಳಿಗಳಲ್ಲಿ ಮದುವೆ ಮಾಡಬೇಕಾದರೆ ಬೀದಿಯಲ್ಲಿ ಮಾಡಬೇಕು. ಅವರಕ್ಕಾಗಿಯಾದರೂ ಒಂದು ಕಲ್ಯಾಣ ಮಂದಿರ ಬೇಕಾಗುತ್ತದೆ. ಆದ್ದರಿಂದ ನಾವು ಹಳ್ಳಿಯಲ್ಲಿ ಗುರ್ತಿಸಬೇಕಾಗುತ್ತದೆ. ಅದಕ್ಕಾಗಿ ಸರ್ಕಾರದ ವತಿಯಿಂದ ಹಳ್ಳಿಮಟ್ಟದಲ್ಲಿ ಕಲ್ಯಾಣ ಮಂದಿರವನ್ನು ಕಟ್ಟಿಸುವುದಕ್ಕೆ ಯೋಚನೆ ಮಾಡಬೇಕೇ ವಿನ: ತಾಲ್ಲೂಕು ಮಟ್ಟ ಮತ್ತು ಜಿಲ್ಲಾ ಮಟ್ಟದಲ್ಲಿ ಮಾಡಬಾರದು. ಅದಕ್ಕೆ ಆದ್ಯತೆ ಕೊಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಏಕೆಂದರೆ, ಬಡವರು ಬಹಳವರ್ಷಗಳಿಂದ ಮದುವೆ ಮಾಡುತ್ತಾ ಮಾಡುತ್ತಾ ಮಣ್ಣು ಮತ್ತು ಅನ್ನವನ್ನು ಜೊತೆಯಲ್ಲಿತಿನ್ನುತ್ತಿದ್ದಾರೆ. ಆದ್ದರಿಂದ ಅವರಿಗೆ ಏನಾದರೂ ಒಂದು ಹೊಸ ದಾರಿಯನ್ನು ಸೂಚಿಸಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ನಿಮ್ಮ ಸರ್ಕಾರದವರು ತಾಳಿಭಾಗ್ಯವನ್ನು ತೆಗೆದು ಬಿಟ್ಟಿರಾ? ಹಿಂದಿನ ಸರ್ಕಾರ ಎಲ್ಲರಿಗೂ ತಾಳಿ ಕೊಡುತ್ತಿದ್ದರು. ಅದು ಹೋಯಿತೋ, ಇನ್ನೂ ಇದೆಯೋ? ನಿಮ್ಮ ಸರ್ಕಾರದವರು ಅದನ್ನು ಮುಂದುವರಿಸಿದ್ದಿರೋ ಹೇಗೆ? ಹಿಂದಿನ ಸರ್ಕಾರದವರು ಕೊಡುತ್ತಿದ್ದರು. ಈಗ ಕಲ್ಯಾಣ ಮಂಟಪವನ್ನೇ ರದ್ದು ಮಾಡಿ ಎಂದು ಹೇಳುತ್ತಾರೆ. ಹಿಂದಿನ ಸರ್ಕಾರದವರು ತಾಳಿಕೊಟ್ಟು . . . .

ಶ್ರೀ ಬಸವರಾಜರಾಯರೆಡ್ಡಿ:- ಈಗ ತೊಟ್ಟಿಲು ಭಾಗ್ಯಯ ಮಾಡಬೇಕೆ ಹೇಗೆ?

ಶ್ರೀ ವಾಟಾಳ್ ನಾಗರಾಜ್:- ಆದ್ದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಹಿಂದಿನ ಸರ್ಕಾರದ ನೀತಿ ತಾಳಿ ಭಾಗ್ಯ ಯೋಜನೆ ತಮ್ಮ ಸರ್ಕಾರದಲ್ಲಿಯೂ ಮುಂದುವರಿಸಿದೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಬಸವರಾಜ ರಾಯರೆಡ್ಡಿ:- ತಾಳಿ ಭಾಗ್ಯ ಯೋಜನೆಯನ್ನು ನಮ್ಮವರೇ ವಾಪಸ್ಸು ತೆಗೆದುಕೊಂಡರು.

ಶ್ರೀ ಎಸ್.ಬಂಗಾರಪ್ಪ:- ಉತ್ತರ ಅಲ್ಲೇ ಇದೆ.

ಶ್ರೀ ಪೆರಿಕಲ್.ಎಂ.ಮಲ್ಲಪ್ಪ:- ಈ ಪ್ರೊಫೆಷನ್ ಟ್ಯಾಕ್ಸ್ ಬಿಲ್ ಪೇಜ್ 14 ರಲ್ಲಿ ಸಬ್ ಕ್ಲಾಸ್ 9 ರಲ್ಲಿ 250 ರಿಂದ 500 ರೂಪಾಯಿವರೆಗೆ ತೆರಿಗೆ ಹಾಕಿದ್ದೀರಿ. ಮತ್ತೆ ಪೇಜ್ 16 ರಲ್ಲಿ ಸಬ್‌ಕ್ಲಾಸ್ 20 ರಲ್ಲಿ each partner of a firm engaged in any profession,

trade or callings. ಅವರಿಗೂ ಅದೇ ರೀತಿ ಕೊಟ್ಟಿದ್ದೀರಿ. ಅಂದರೆ ಒಂದು ಕಡೆ ಫರ್ಮ್‌ನವರು ಪ್ರೊಫೆಷನ್ ಟ್ಯಾಕ್ಸ್ ಕೊಡಬೇಕೆಂದು ಹೇಳಿದ್ದೀರಿ. ಮತ್ತೆ each partner ಕೂಡ ಕೊಡಬೇಕೆಂದು ಹೇಳಿದ್ದೀರಿ. ಒಂದು ವೇಳೆ ಒಂದು ಫರ್ಮ್‌ನಲ್ಲಿ 4-5 ಪಾರ್ಟ್‌ನರ್‌ಗಳಾದರೆ ಅವರು 4-5 ಕಡೆ ಕೊಡಬೇಕೆ ? ಇದರ ಬಗ್ಗೆ ಒಂದು ಕ್ಲಾರಿಫಿಕೇಶನ್ ಕೊಡಿ. ಇದು ಬದಲ್ ಟ್ಯಾಕ್ಸೇಷನ್ ಆಗುವುದಿಲ್ಲವೇ ?

ಶ್ರೀ ಎಸ್.ಬಂಗಾರಪ್ಪ:- ಏನೂ ಆಗುವುದಿಲ್ಲ. ಏಕೆಂದರೆ, ಒಬ್ಬ ವ್ಯಕ್ತಿ ಪಾರ್ಟ್‌ನರ್‌ಶಿಪ್ ಫರ್ಮ್‌ನಲ್ಲೂ ಇರಬಹುದು, ಅಲ್ಲಿಯೂ ಕೂಡ ಅರ್ನ್ ಮಾಡಿಕೊಳ್ಳಬಹುದು. ಇದು ಇಂಡಿವಿಜುಯಲ್ ಆಗಿ ಕೊಡಬೇಕು. It is all the explanation. It does not require any elaborate explanation. That is how I look at it. ಅವನು ಮತ್ತೊಂದರಲ್ಲಿ ಮಾಡತಕ್ಕಂಥ ಹಕ್ಕು as member of the firm ಅದನ್ನು ನೀವು ಪ್ರೈವೇಟ್ ಮಾಡುವುದಕ್ಕಾಗುವುದಿಲ್ಲ. ಆ ದೃಷ್ಟಿಯಿಂದ ಅಲ್ಲಿ ಡಬಲ್ ಕ್ಯಾಟಗಿರಿ ಇರತಕ್ಕಂಥ ಒಂದು ವಿಚಾರ ಇದೆಯೇ ವಿನ: ಇನ್ಯಾವುದೂ ಕೂಡ ಇಲ್ಲ. ಅನಂತರ ಕಲ್ಯಾಣ ಮಂಟಪದ ವಿಚಾರದಲ್ಲಿ ಮಾನ್ಯ ಪ್ರೊಫೆಸರ್‌ರವರ ಅಭಿಪ್ರಾಯವೇನೆಂದರೆ, ಕಲ್ಯಾಣ ಮಂಟಪಗಳ ಮೇಲೆ ತೆರಿಗೆ ಹಾಕುವುದಕ್ಕಿಂತ ಹೆಚ್ಚಾಗಿ, ಮೊದಲು ಮದುವೆ ಮೇಲೆ ಟ್ಯಾಕ್ಸ್ ಹಾಕಿ ಎಂದು ಹೇಳಿದರೆ ಅದು ಬೇರೆ. That will open pandorea's box ಹೇಗೆ? ಮ್ಯಾರೇಜ್ ರಿಜಿಸ್ಟ್ರೇಶನ್ ಮಾಡಿದರೆ ಗಂಡ ಹೆಂಡತಿ ಎನ್ನತಕ್ಕಂಥಾದ್ದು ಗ್ಯಾರಂಟಿಯಾಗುತ್ತದೆ. ಜೊತೆಗೆ ಸರ್ಟಿಫಿಕೇಟ್ ಕೂಡ ಸಿಗುತ್ತದೆ. ಇಲ್ಲವೆಂದು ಹೇಳುವುದಿಲ್ಲ. ಇಲ್ಲಿ ಮದುವೆ ಆಗಿಲ್ಲ, ಬಿಟ್ಟಿಲ್ಲ ಎನ್ನತಕ್ಕಂಥಾದ್ದು, ಅದು ಬೇರೆ ಜಗಳವಾಡಿಕೊಂಡು ಕೆಲವುಕಡೆ ಬಂದಿರತಕ್ಕಂಥ ಪ್ರಶ್ನೆ ಕೂಡ ತಮಗೆ ಗೊತ್ತಿದೆ. ಇದರ ಬಗ್ಗೆ ಬಹಳ ವರ್ಷಗಳಿಂದ ಕೂಡ ಚರ್ಚೆ ಮಾಡುತ್ತಿರತಕ್ಕಂಥ ವಿಚಾರವಿರುವುದರಿಂದ ಹೌದು ಎನ್ನಬಹುದಾಗಿದೆ. ಇದರಲ್ಲಿ ಏನಾಯಿತೆಂದರೆ, ಅಲ್ಲಿ ಮತ್ತೆ ಕ್ಯಾಟಗರಿವೈಸ್ ಮಾಡಿಕೊಳ್ಳಬೇಕಾಗುತ್ತದೆ. ಬಡವರು ಮದುವೆ ಮಾಡಿಕೊಳ್ಳಬೇಕಾದರೆ ಅಯ್ಯೋ ನಾವು ಮದುವೆ ಮಾಡಿಕೊಳ್ಳುವುದಕ್ಕೆ ಹೋದರೆ ಈ ಸರ್ಕಾರ ಟ್ಯಾಕ್ಸ್ ಬೇರೆ ಹಾಕುತ್ತದೆ. ಎಂದು ಕೊಳ್ಳುತ್ತಾರೆ. tax on marriage. ಏಕೆಂದರೆ, ಅದು ಬರುತ್ತದೆ. ಮತ್ತು ಅಲ್ಲಿ ಬೇರೆ you will have to distinguish ಬಡವರ ಮದುವೆಗಳು, ಮಧ್ಯಮ ವರ್ಗದ ಮದವೆಗಳು, ಅನಂತರ ಸಾಹುಕಾರರ ಮದುವೆಗಳು, ಈ ಮೂರು ರೀತಿಯ ಕ್ಯಾಟಗಿರಿ ಮಾಡತಕ್ಕಂಥ ವಿಚಾರ ಕೂಡ ಬೇರೆ ಬರುತ್ತದೆ. ಈ ಒಂದು ದೃಷ್ಟಿಯಿಂದ ಅಲ್ಲಿಯ ವಿಚಾರ ಅಲ್ಲಿಯೇ ಇದೆ. ಸದ್ಯಕ್ಕೆ ಸರ್ಕಾರದವರು tax on marriage ಹಾಕತಕ್ಕಂಥ ಪರಿಸ್ಥಿತಿಯನ್ನು ನಾವೇನು ಯೋಚನೆ ಮಾಡಿಲ್ಲ. ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ ಕಲ್ಯಾಣ ಮಂಟಪ ಕಟ್ಟಿಸಿರತಕ್ಕಂಥ ವಿಚಾರ ಸರ್ಕಾರದಲ್ಲಿಲ್ಲ. ಏಕೆಂದರೆ, ಬಜೆಟ್‌ನಲ್ಲಿ ಅದಕ್ಕೆ ತೆರಿಗೆ ಹಾಕತಕ್ಕಂಥ ವಿಚಾರ ಬೇರೆ ಬರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಕಲ್ಯಾಣ ಮಂಟಪವನ್ನು ಯಾರು ಕಟ್ಟಿದ್ದಾರೆ, ಅಲ್ಲಿನಾವು ಟ್ಯಾಕ್ಸ್ ಅನ್ನು ಹಾಕಬೇಕೆ ? ಬಿಡಬೇಕೆ ? ಹಾಕಿದರೆ ಎಷ್ಟು ಹಾಕಬೇಕು? ಇವೆಲ್ಲಾ ವಿಚಾರವನ್ನು ನಾವು ಯೋಚನೆ ಮಾಡಬೇಕಾಗಿದೆ. ಶ್ರೀಮಾನ್ ರಿಡ್ಡಿಯವರು ಹೇಳಿದ ಹಾಗೆ, ಪಟ್ಟಣ ಪ್ರದೇಶದಲ್ಲಿ ಇನ್ನು ಸ್ವಲ್ಪ ಜಾಸ್ತಿ ಹಾಕಬೇಕು ಎನ್ನತಕ್ಕಂಥ ವಿಚಾರ ಹೇಳಿದರು. ಒಂದು ದಿನಕ್ಕೆ 25,000- 30,000 - 35,000ರೂಪಾಯಿಗಳಂತೆ ಛಾರ್ಜ್ ಮಾಡುತ್ತಾ ಹೋದರೆ , ಇದಕ್ಕೆ ತಡೆದುಕೊಳ್ಳಲಾರದಷ್ಟು ತೆಗೆದುಕೊಂಡು ಹೋಗಿ ಕಲ್ಯಾಣ ಮಂಟಪಗಳ ಮೇಲೆ ಹಾಕಬೇಕಾಗುತ್ತದೆ. ಆದರೆ, ಗ್ರಾಮೀಣ

ಪ್ರದೇಶದಲ್ಲಿ ಪಾಪ್ಯುಲೇಶನ್ ಬೇಸಿಸ್ ಮತ್ತೊಂದು ವಿಚಾರ ನೋಡಿ ತೆರಿಗೆ ಹಾಕುವುದರಲ್ಲಿ ಬಹಳ ಅರ್ಥವಿದೆ. We will keep that point in mind. ಅದನ್ನು ಏನು ಮಾಡಬೇಕೆಂಬ ವಿಚಾರ ಮಾಡಿ, ಯಾವರೀತಿ ಕನ್ಸೇಷನ್ ತೋರಿಸಬಹುದು ಎನ್ನತಕ್ಕಂಥ ವಿಚಾರ ಮಾಡೋಣ.

ಶ್ರೀ ವಾಟಾಳ್ ನಾಗರಾಜ್:- ನೀವು ಏನೇ ತೆರಿಗೆ ಹಾಕಿದರೂ ಅವರಿಗೆ ಅನಾನುಕೂಲವಾಗುವುದಿಲ್ಲ. ಮತ್ತೆ ಮದುವೆಯವರ ಮೇಲೆ ಆ ತೆರಿಗೆಯನ್ನು ಹಾಕಿಬಿಡುತ್ತಾರೆ. ಎರಡೂವರೆ ಸಾವಿರ ರೂಪಾಯಿಗಳು ಜಾಸ್ತಿ ಮಾಡಿದ್ದರೆ. ನೀವು ಮೂರು ಸಾವಿರ ರೂಪಾಯಿಗಳನ್ನು ಜಾಸ್ತಿ ಮಾಡಿದರೆ, ಅವರು ಬಿಲ್ ಹಾಕುವಾಗ ತೆರಿಗೆಯನ್ನು ಸೇರಿಸಿ ಬರೆಯುತ್ತಾರೆ. ಕಲ್ಯಾಣ ಮಂಟಪದವರಿಗೆ ತೊಂದರೆಯಾಗುವುದಿಲ್ಲ ಕಲ್ಯಾಣ ಮಂಟಪಕ್ಕೆ ಬರುವ ದುಡ್ಡು ಬಂದೇ ಬರುತ್ತದೆ. ಯಾರು ಮದುವೆ ಮಾಡುತ್ತಾರೋ ಅವರ ಮೇಲೆ ತೆರಿಗೆ ಬೀಳುತ್ತದೆ.

ಒಬ್ಬ ಮಾನ್ಯ ಸದಸ್ಯರು:-ಮದವೆಯಾಗುವರ ಮೇಲೆಯೇ ಟ್ಯಾಕ್ಸ್ ಬೀಳುತ್ತದೆ.

ಶ್ರೀ ಎಸ್.ಬಂಗಾರಪ್ಪ:-ಟ್ಯಾಕ್ಸ್ ಅವರ ಮೇಲೆಯೇ ಬೀಳುತ್ತದೆ. ಅದಕ್ಕೆ ನಾನು ಹೇಳುವುದು. ಅವರು ಕಲ್ಯಾಣ ಮಂಟಪಕ್ಕೆ ಹೋಗಿ ಏತಕ್ಕೆ ಮದುವೆ ಮಾಡಿಕೊಳ್ಳಬೇಕು? ಮರದ ಬುಡಕ್ಕೆ ಹೋಗಿ ತಾಳಿ ಕಟ್ಟಿದರೆ ಆಗುವುದಿಲ್ಲವೇ? ತಾಳಿ ದಾರವನ್ನು ಕಟ್ಟುವುದರಲ್ಲಿಯೂ ಕೂಡ ಯಾವ್ಯಾವ ರೀತಿಯಲ್ಲಿ ತಾಳಿಯನ್ನು ಕಟ್ಟಬೇಕೆನ್ನುವುದರ ಬಗ್ಗೆ ಭಾರೀ ದೊಡ್ಡ ವ್ಯಾಖ್ಯಾನಗಳಿವೆ. ತಾಳಿ ಭಾಗ್ಯ ಯಾವುದಿತ್ತು, ಅವೆಲ್ಲಾ ಕೂಡ ಹಿಂದಕ್ಕೆ ಹೋಗಿವೆ. ಅರಿಶಿನ ಕೊಂಬನ್ನು ಒಂದು ದಾರಕ್ಕೆ ಸೇರಿಸಿ ಕಟ್ಟಿದರೆ ಅದು ಕೂಡ ಮದುವೆ ಎಂಬುದು ನಮ್ಮ ಹಿಂದೂ ಧರ್ಮದಲ್ಲಿದೆ. ಆ ಧರ್ಮ ಸಾರಿ ಸಾರಿ ಹೇಳುತ್ತಿದೆ. ಬಂಗಾರದ ತಾಳಿಯೇ ಬೇಕೆಂದೇನೂಇಲ್ಲ. ಅನಂತರ, ಕಲ್ಯಾಣ ಮಂಟಪಕ್ಕೆ ಹೋಗಿ ಏತಕ್ಕೆ ಮದುವೆಯಾಗಬೇಕು ? ಇವರು ಕೂಡ ಏನೂ ಕಡಿಮೆ ಜನರಲ್ಲ. ಅವರು ಅಲ್ಲಿಗೆ ಹೋಗಿ ಪೀಪಿ ಊದಿಸುವುದು, ಇದನ್ನು ಕೂಡ ವ್ಯಾಖ್ಯಾನಗಳಲ್ಲಿ ಇಟ್ಟುಕೊಂಡಿದ್ದಾರೆ. ಈಗ ನಮ್ಮ ನಮ್ಮಲ್ಲಿ ವ್ಯಾಖ್ಯಾನ ಬಂದಿದ್ದರಿಂದ ಅವಕ್ಕೂ ಕೂಡ ರೇಟ್ ಏರುತ್ತಾ ಹೋಗಿದೆ. ಮರದ ಬುಡದಲ್ಲಿ ಮದುವೆ ಮಾಡುವುದನ್ನು ಕಲಿತು ಬಿಟ್ಟರೆ ರೇಟ್ ಸ್ವಲ್ಪ ಕಡಿಮೆಯಾಗಬಹುದು. ಈ ಜನರು ಏನು ಮಾಡುತ್ತಾರೆಂದರೆ, ಕಲ್ಯಾಣ ಮಂಟಪವನ್ನು ಬುಕ್ ಮಾಡಬೇಕೆಂದರೆ, 15-20 ದಿವಸಗಳ ಮುಂಚೆ ಅಲ್ಲ, 40-50 ದಿವಸಗಳಿಗೂ ಮೊದಲೇ ಬೇರೆ ಬೇರೆ ಹೆಸರುಗಳಲ್ಲಿ ಬುಕ್ ಮಾಡಿಕೊಳ್ಳುವುದು. ನಂತರ ಮಾರಾಟ ಮಾಡುವುದು. ಈ ವಿಷಯ ಕೂಡ ನನ್ನ ಗಮನಕ್ಕೆ ಬಂದಿತು. ತಾವು ಪಟ್ಟಣ ಪ್ರದೇಶದಲ್ಲಿ ಇನ್ನೂ ರೇಟ್ ಜಾಸ್ತಿ ಮಾಡಿ ಎನ್ನತಕ್ಕಂಥ ಅಭಿಪ್ರಾಯ ಕೊಟ್ಟಿದ್ದೀರಿ. ನಾವು ಸದ್ಯಕ್ಕೆ ಅಷ್ಟಕ್ಕೆ ನಿಲ್ಲಿಸಿದ್ದೇವೆ. ಆದರೆ, ಗ್ರಾಮೀಣ ಪ್ರದೇಶದಲ್ಲಿ there I agree. ಏಕೆಂದರೆ, ಗ್ರಾಮೀಣ ಪ್ರದೇಶಗಳಲ್ಲಿ ಎಲ್ಲಾದರೊಂದು ಕಲ್ಯಾಣ ಮಂಟಪವಿದ್ದರೆ, ನಾವು 2000, 2500 ರೂಪಾಯಿಗಳನ್ನು ಹಾಕಿದರೆ ಜಾಸ್ತಿಯಾಗುತ್ತದೆ ಎನ್ನತಕ್ಕಂಥ ಅಭಿಪ್ರಾಯ ಇದೆಯಲ್ಲಾ, ಆ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಮುಂದೆ ಸ್ವಲ್ಪ ಕ್ಯಾಟಗರಿಮೈಸ್ on the basis of the population of each area. ಮಾಡಬೇಕಾಗಿದೆ. ಅದನ್ನು ನೋಡಿ ಮಾಡತಕ್ಕುದ್ದು. ಅದನ್ನು ಗಮನದಲ್ಲಿಟ್ಟುಕೊಂಡು ಮುಂದೆ ಯಾವರೀತಿ ಸೂಕ್ತವಾದ ತಿದ್ದುಪಡಿಯನ್ನು ತರಬಹುದು ಎಂದು ನೋಡಿ ನಮಗೆ ನಾಲ್ಕು ರೂಪಾಯಿಗಳು ಕಡಿಮೆಯಾದರೂ ಚಿಂತೆ ಇಲ್ಲ, ಗ್ರಾಮೀಣ ಪ್ರದೇಶಕ್ಕೆ ಒತ್ತು ಕೊಡತಕ್ಕ ವಿಚಾರವನ್ನು ಗಮನದಲ್ಲಟ್ಟುಕೊಳ್ಳೋಣ. This is number one. ಇನ್ನೊಂದು ವಿಚಾರವೇನೆಂದರೆ, ಮದುವೆಯವರ ಮೇಲೆತೆರಿಗೆಯನ್ನು

ಹಾಕತಕ್ಕ ವಿಚಾರದಲ್ಲಿ ಪ್ರೊ.ನಂಜುಂಡಸ್ವಾಮಿಯವರ ಅಭಿಪ್ರಾಯವೇನಿದೆ ಅದು ಸದ್ಯಕ್ಕೆ ಸರ್ಕಾರದ ಮುಂದೆ ಇಲ್ಲ. ಅವರು ಬಹಳ ಆಳವಾಗಿ ಅಭ್ಯಾಸ ಮಾಡಿಕೊಂಡು ಹೇಳುತ್ತಿದ್ದಾರೆ.

ಪ್ರೊ ಎಂ.ಡಿ.ನಂಜುಂಡಸ್ವಾಮಿ :- ನಮ್ಮ ಸದಸ್ಯರು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ. ನೀವು ಕಲ್ಯಾಣ ಮಂಟಪದ ಮೇಲೆ ತೆರಿಗೆಯನ್ನು ಹಾಕಿದರೂ ಅದು ಕೊನೆಗೆ ಮದುವೆ ಗಂಡಿನ ಮೇಲೆ ಬೀಳುತ್ತದೆಂದು ವಿಧಾನವಾಗಿ ನಮ್ಮ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. it actually amounts to taxing on marriages. ಕಲ್ಯಾಣ ಮಂಟಪದ ಮೇಲೆ ತೆರಿಗೆ ಎಂದರೆ ಕಲ್ಯಾಣದ ಮೇಲೆ ತೆರಿಗೆ. ಅದು ಗಂಡಿನಮೇಲೋ ಅಥವಾ ಹೆಣ್ಣಿನವರ ಮೇಲೋ ಬೀಳುತ್ತದೆ. ನನ್ನ ವಿಚಾರವೇನೆಂದರೆ, ಕಲ್ಯಾಣ ಮಂಟಪದ ಸಂಸ್ಕೃತಿ ಇತ್ತೀಚೆಗೆ ಬೆಳೆದು ಬಂದಿರತಕ್ಕದ್ದು. ಇದನ್ನು ನೀವು ಆದಷ್ಟು ಡಿಸ್‌ಕರೇಜ್ ಮಾಡಬೇಕು. ಸಂತೆಯ ರೀತಿ ಮದವೆ ಮಾಡುವುದು ಒಂದು ಅವಿವೇಕದ ಪರಮಾವಧಿ. ನಮ್ಮಲ್ಲಿ ಗಂಭೀರವಾಗಿ ಮದುವೆ ಮಾಡತಕ್ಕ ಒಂದು ಪದ್ಧತಿ ಹಿಂದಿನಿಂದ ನಡೆದುಕೊಂಡು ಬಂದಿದೆ.

ಶ್ರೀ ವಾಟಾಳ್ ನಾಗರಾಜ್:- ಪ್ರತಿಯೊಬ್ಬರು ಅದರ ಬಗ್ಗೆ ಮಾತನಾಡುತ್ತಿದ್ದಾರೆ. ಆದರೆ ದೇಶದಲ್ಲಿ ಅದನ್ನು ಆಚರಣೆಯಲ್ಲಿ ತರುವುದಿಲ್ಲ.

ಪ್ರೊ.ಎಂ.ಡಿ.ನಂಜುಂಡಸ್ವಾಮಿ :- ನನ್ನನ್ನು ಉದ್ದೇಶಿಸಿ ಮಾತನಾಡಲಿಲ್ಲ ತಾನೆ ?

ಶ್ರೀ ವಾಟಾಳ್ ನಾಗರಾಜ್:- ಎಲ್ಲರನ್ನೂ ಉದ್ದೇಶಿಸಿ ಮಾತನಾಡಿದ್ದು. ಈಗ ನಡೆಯುತ್ತಿರುವುದು ಹೀಗೆ. ಹೇಳುವುದು ಒಂದು ಬದನೆ ಕಾಯಿಯನ್ನು ಹಿಂದೆ ತೆಗೆದುಕೊಂಡು ಹೋಗಿ ತಿಂದಂತಿದೆ. ಸ್ವಾಮೀಜಿಯವರು ಬದನೆಕಾಯಿಯನ್ನು ತಿನ್ನಬಾರದೆಂದು ಉಪದೇಶಮಾಡಿ ಆಮೇಲೆ ಅವರೇ ಹಿಂದೆ ತೆಗೆದುಕೊಂಡು ಹೋಗಿ ಬದನೆಕಾಯಿಯನ್ನು ತಿಂದಂತೆ ಆಯಿತು.

ಮಾನ್ಯ ಸದಸ್ಯರೊಬ್ಬರು:- ಪ್ರೊಫೆಸರ್ ರವರು ಏನಾದರು ರಿಜಿಸ್ಟರ್ ಮದುವೆಯಾದರೆ?

ಪ್ರೊ. ಎಂ.ಡಿ.ನಂಜುಂಡಸ್ವಾಮಿ:- ನಾನು ಮಾತನಾಡುವಾಗ ಶ್ರೀವಾಟಾಳ್‌ನಾಗರಾಜ್‌ರವರು ಮಾತನಾಡಿದುದರಿಂದ ಹೇಳುತ್ತಿದ್ದೇನೆ. ಇದು ನನ್ನ ವೈಯಕ್ತಿಕವಾದ ವಿಚಾರವಾದರೂ ಕೂಡ ಇದು ಸಾಮಾಜಿಕವಾಗಿ ಆಗಬೇಕು ಎನ್ನುವ ಆಸೆಯಿಂದ ನಾನು ಹೇಳುತ್ತಿದ್ದೇನೆ. ನನ್ನ ಮದುವೆಗೆ 23 ರೂಪಾಯಿ ಮಾತ್ರ ಖರ್ಚಾಯಿತು. ಆ ದುಡ್ಡು ನನ್ನದೂ ಅಲ್ಲ. ಸಬ್‌ರಿಜಿಸ್ಟ್ರಾರ್‌ರವರದ್ದು. ನಾನು ಏಕೆ ಹೇಳುತ್ತಿದ್ದೇನೆಂದರೆ, ನಾವು ಗಂಭೀರವಾಗಿ ಮದವೆಯನ್ನು ಮಾಡತಕ್ಕ ಸಂಸ್ಕೃತಿಯವರು ನಾವು ಈಗ ಕಲ್ಯಾಣಮಂಟಪದಲ್ಲಿ ಮದವೆ ಮಾಡುವ ಸಂತೆಯ ಸಂಸ್ಕೃತಿಗೆ ಬಂದಿದ್ದೇವೆ. ಹಿಂದೆ ಹಸಿರುವಾಣಿ ಚಪ್ಪರವನ್ನು ಹಾಕಿಕೊಂಡು ನಮ್ಮ ಹಳ್ಳಿಗಳಲ್ಲಿ ಬಹಳ ಗಂಭೀರವಾಗಿ ಮದವೆ ಮಾಡುತ್ತಿದ್ದರು. ಈಗಲೂ ಕೂಡ ಆ ರೀತಿ ಮಾಡಬಹುದು. ಆದ ಕಾರಣ ಸರ್ಕಾರಿ ಕಾರ್ಯಕ್ರಮದಲ್ಲೂ ಕಲ್ಯಾಣ ಮಂಟಪಕ್ಕೆ ಹಣವನ್ನು ಕೊಡುವುದು ಏನಿದೆ ಅದನ್ನೆಲ್ಲ ರದ್ದು ಮಾಡಬೇಕು. ಅದಕ್ಕೆಲ್ಲ ತಾವು ಪ್ರೋತ್ಸಾಹ ಕೊಡಬಾರದು.

ಶ್ರೀ ಎಸ್.ಬಂಗಾರಪ್ಪ:- ಪ್ರೊ. ನಂಜುಂಡಸ್ವಾಮಿಯವರು ಹೇಳುವುದರಲ್ಲಿ ಅರ್ಥವಿದೆ. ಕಲ್ಯಾಣಮಂಟಪಕ್ಕೆ ಹಣವನ್ನು ತೆಗೆದುಕೊಂಡು ಹೋಗಿ ಕೊಟ್ಟು ಕಟ್ಟಿಸುವುದರಲ್ಲಿ ಅರ್ಥವಿಲ್ಲ. ಪ್ರೊಡಕ್ಟೀವ್ ಎಂದರೆ ಮಕ್ಕಳನ್ನು production ಮಾಡತಕ್ಕ ಕಾರ್ಯಕ್ರಮವಲ್ಲ. ಪ್ರೊಡಕ್ಷನ್ ಎಂದರೆ ಆರ್ಥಿಕ ಅಭಿವೃದ್ಧಿಗಾಗಿ ಕಾಂಟ್ರಿಬ್ಯೂಟ್ ಮಾಡುವುದು. On the other hand ಅದುnegative ಆಗಿಯೂ ಕೂಡ contribute ಮಾಡುತ್ತದೆ. ಇದರಿಂದ population growth rate ಕೂಡ ಜಾಸ್ತಿ ಆಗುತ್ತದೆ. ಇದರಲ್ಲಿ ಒಂದು ವಿಚಾರವನ್ನು ಗಮನಿಸಬೇಕಾಗುತ್ತದೆ.

ಈ ಕಲ್ಯಾಣ ಮಂಟಪದಲ್ಲಿಯೇ ಮದುವೆಯನ್ನು ಮಾಡಬೇಕು ಎನ್ನುವುದು ಈಗ ಬಡಜನರಲ್ಲಿ ಬಹಳ ವೇಗವಾಗಿ ಬೆಳೆಯುತ್ತಿದೆ. ಅದನ್ನು ನಾವು ಡಿಸ್‌ಕರೇಜ್ ಮಾಡುವುದರಲ್ಲಿ ಬಹಳ ಅರ್ಥವಿದೆ. ಆದುದರಿಂದ ಮಾನ್ಯ ಪ್ರೊ.ನಂಜುಂಡಸ್ವಾಮಿಯವರ ಅಭಿಪ್ರಾಯವನ್ನು ಒಪ್ಪಿ ಅದರಲ್ಲಿ ಸಂಪೂರ್ಣವಾಗಿ ಅರ್ಥವಿದೆ ಎನ್ನತಕ್ಕ ಮಾತನ್ನು ಅನಿವಾರ್ಯವಾಗಿ ಹೇಳಬೇಕಾಗಿದೆ. ಹಿಂದೆ ಹಸಿರು ಚಪ್ಪರವನ್ನು ಹಾಕಿ ಮದುವೆ ಮಾಡತಕ್ಕದ್ದು ಇತ್ತು. ಹಿಂದೆ ಬೇಕಾದಷ್ಟು ಹಸಿರು ಸಿಗುತ್ತಿತ್ತು. ಆದರೆ ಈಗ ಅವರಿಗೆ ಚಪ್ಪರವನ್ನು ಹಾಕಲು ಹಸಿರು ಕೂಡ ಸಿಕ್ಕುವುದಿಲ್ಲ. ನಮ್ಮ ಕಡೆ ಮದುವೆ ಮಾಡಬೇಕಾದರೆ ಬಗನೆ ಮರವನ್ನು ತಂದು ಮಾಡುತ್ತಿದ್ದರು. ನಮ್ಮ ಮಲೆನಾಡಿನಲ್ಲಿ ಬಗನೆ ಮರವೆಂದು ಬಹಳ ಚೆನ್ನಾಗಿ ಬಳೆಯುತ್ತದೆ, ಅದರಿಂದ ಹಸಿರು ಬೇಕಾದಷ್ಟು ಸಿಗುತ್ತದೆ. ಆದರೆ ಈಗ ಆ ಮರವನ್ನು ಕೊರಡು ಮಾಡುವುದಕ್ಕೋಸ್ಕರ ಕಡಿದು ಕಡಿದು ಹಾಕಿದ್ದಾರೆ. ಹೊಲಗಳಲ್ಲಿ ಕೊರಡನ್ನು ಉಪಯೋಗ ಮಾಡಲು ಆ ಮರವನ್ನು ಕಡಿದು ಆ ಮರವೆಲ್ಲ ಈಗ ಹೊರಟುಹೋಗಿದೆ. ಅದು ಬಯಲು ಸೀಮೆಗೆ ಸಾಕಷ್ಟು ಹೋಗಿಬಿಟ್ಟಿದೆ. ಈಗ ಆ ಬಗನೆ ಮರಗಳೂ ಕೂಡ ಇಲ್ಲ. ಹಸಿರು ಕೂಡ ಅಷ್ಟು ಸುಲಭವಾಗಿ ಸಿಕ್ಕುವುದಿಲ್ಲ. ಈಗ ಮಾವಿನ ಎಲೆಯನ್ನು ತಂದು ಹಾಕುತ್ತಿದ್ದಾರೆ. ಆ ಮರವೂ ಕೂಡ ಕಡಿಮೆಯಾಗಿದೆ. ಅದೆಲ್ಲವನ್ನು ಮಾರಾಟ ಮಾಡಿ ಮಾಡಿ ಬಹಳ ಒಳ್ಳೆಯ ಹಣ್ಣುಗಳಿರತಕ್ಕ ಮರಗಳು ಸಹ ಮಾರಾಟವಾಗಿದೆ. ಬಡತನದಿಂದ ಮನೆಯ ಹಿತ್ತಲಲ್ಲಿರತಕ್ಕ ಬಹಳ ಒಳ್ಳೆಯ ಮರಗಳನ್ನು ಸಹ ಕಡಿದು ಮಾರಾಟ ಮಾಡಿದ್ದಾರೆ. ಇದು ಬಹಳ ಮನಸ್ಸಿಗೆ ನೋವಾಗತಕ್ಕ ವಿಚಾರ. ತಾವು ಏನು 23 ರೂಪಾಯಿಯಲ್ಲಿ ಮದುವೆಯಾಯಿತೆಂದು ಹೇಳಿದ್ದೀರಿ, ಅದನ್ನು ಪಾಪ್ಯುಲರೈಸ್ ಮಾಡುವುದರಲ್ಲಿ ಬಹಳ ಅರ್ಥ ಇದೆ, ಆಗ ಕಲ್ಯಾಣ ಮಂಟಪಕ್ಕೆ ಬೇಡಿಕೆ ಇರುವುದಿಲ್ಲ. ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಅದಕ್ಕೆ ನಾನು ಹೇಳುತ್ತಿದ್ದೇನೆ. ಇದಕ್ಕೆ ಹೆಚ್ಚಾಗಿ ಪ್ರಚಾರ ಕೊಡುತ್ತಾ ಹೋಗಬೇಕು. ಇಷ್ಟು ಹೇಳಿ, ಇನ್ನು ಉಳಿದಿರತಕ್ಕದನ್ನು ಆಮೇಲೆ ಗಮನಕ್ಕೆ ತೆಗೆದುಕೊಳ್ಳೊಣ. ಈಗ ತಾವು ಈ ಬಿಲ್‌ಗೆ ಒಪ್ಪಿಗೆಯನ್ನು ಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಛೇರ್ಮನ್:- ಪ್ರಸ್ತಾವ ಏನೆಂದರೆ, 1992ನೇ ಸಾಲಿನ ಕರ್ನಾಟಕ ವೃತ್ತಿಗಳು, ಕಸುಬುಗಳು, ಆಜೀವಿಕೆಗಳು ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2 ರಿಂದ 4ರವರೆಗೆ:-

ಛೇರ್ಮನ್:- ಖಂಡ 2 ರಿಂದ 4ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 4ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಛೇರ್ಮನ್:- ಪ್ರಸ್ತಾವ ಏನೆಂದರೆ ಮೊದಲನೆಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ

ಸಂಹಿತೆಗಳು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಸ್. ಬಂಗಾರಪ್ಪ: (ಮುಖ್ಯಮಂತ್ರಿಗಳು):- 1992ನೇ ಸಾಲಿನ ಕರ್ನಾಟಕ ವೃತ್ತಿಗಳು, ಕಸುಬುಗಳು, ಅಜೀವಿಕೆಗಳು ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಛೇರ್ಮನ್:- ಪ್ರಸ್ತಾವ ಏನೆಂದರೆ, 1992ನೇ ಸಾಲಿನ ಕರ್ನಾಟಕ ವೃತ್ತಿಗಳು, ಕಸಬುಗಳು, ಅಜೀವಿಕೆಗಳು ಮತ್ತು ಉದ್ಯೋಗಗಳ ಮೇಲಣ ತೆರಿಗೆ(ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಸೂದೆಗೆ ಒಪ್ಪಿಗೆ ನೀಡಲಾಯಿತು

3. 1992ನೇ ಸಾಲಿನ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕ ಪರ್ಯಾಲೇಚನಾ ಪ್ರಸ್ತಾವ

ಶ್ರೀ ಎಸ್.ಬಂಗಾರಪ್ಪ: (ಮುಖ್ಯಮಂತ್ರಿಗಳು):-ಮಾನ್ಯ ಅಧ್ಯಕ್ಷರೇ, 1992ನೇ ಸಾಲಿನ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೇಚಿಸಬೇಕೆಂದು ಕೋರುತ್ತೇನೆ.

The question was proposed.

Sri. S.BANGARAPPA :- A small amendement is there. It is the Karnataka Entertainments Tax (Amendment) Bill. This bill seeks to provide a provision for apportioning 90% of the amounts collected as surcharge to the local bodies.

ಇದು ಲೋಕಲ್ ಬಾಡೀಸ್‌ನಲ್ಲಿ ಇರತಕ್ಕಂತಹ 90 ಪರ್ಸೆಂಟ್ ಹಣವನ್ನು ಅವರಿಗೆ ಕೊಡುವುದಕ್ಕೋಸ್ಕರ ಈ ಒಂದು ತಿದ್ದುಪಡಿಯನ್ನು ತರುತ್ತಿದ್ದೇವೆ. ಇದನ್ನು ಬಿಟ್ಟರೆ there are no other purposes. Only one single small amendment. ನಾವು ಏನುಕಲೆಕ್ಟ್ ಮಾಡುತ್ತೇವೆ, ಅದರಲ್ಲಿ ಲೋಕಲ್ ಬಾಡೀಸ್‌ಗೆ 90 ಪರ್ಸೆಂಟ್ ಹೋಗುತ್ತದೆ.

ಶ್ರೀ ಡಿ.ಬಿ.ಚಂದ್ರೇಗೌಡ:- ಮೊದಲು ಕರ್ನಾಟಕದ ಒಳಗಡೆ ತಯಾರು ಮಾಡಿದಂತ ಚಿತ್ರಗಳಿಗೆ ಮಾತ್ರ ಶೇಕಡ 50 ತೆರಿಗೆ ಎಂದು ಇತ್ತು. ಹೊರಗಡೆ ಬಂದು ಮಾಡಿದರೂ ಕೂಡ ಅಷ್ಟೆ. It is stated the Statementof Objects and Reasons :

"After examining the representation made by the Karnataka Film Chamber of Commerece it was considered necessary to extend 50% concession in Entertainment Tax to all Kannada, Kodava, Konkani or Tulu films cosered before 31-12-1987"

ಅಂದರೆ ಇದ್ದ ರಿಸ್ಟ್ರಿಕ್ಟ್ ತೆಗೆದಿದ್ದೀರಿ ಎಂದು ಆಯಿತು.

"irrespective of whetherthe film has been produced within Karnataka or outside and without any time limit"

ಎಂದು ರಿಸ್ಟ್ರಿಕ್ಷನ್ ಟೈಮ್ ಲಿಮಿಟ್‌ನ್ನು ತೆಗೆದಿದ್ದೀರಿ, ಪ್ರೊಡಕ್ಷನ್ ಕರ್ನಾಟಕದ ಒಳಗೆ ಆಗಬೇಕೆಂದು